(24)


ಪಂಚಮ

ಸಂಪುಟ : 7 ಜುಲೈ 20–ಅಗಸ್ಟ್ 5–1983 ಬೆಲೆ : 50 ಪೈಸೆ ಪುಟ ; 12 ಸಂಚಿಕೆ : 15

ಈ ಸಂಚಿಕೆಯಲ್ಲಿ

'ಜಗತ್ತನ್ನು ಒಂದು ಹೆಜ್ಜೆ ಮುನ್ನಡೆಸಿದ' ಮಹಾಕವಿ ಶ್ರೀ ಶ್ರೀ

೧೫-೬-೮೩ ರಂದು ನಿಧನರಾದ ಶ್ರೀ ಶ್ರೀ ಒಂದೆಡೆ ಬರೆದಿದ್ದಾರೆ : ''ಹದಿನೆಂಟು ಪರ್ವಗಳುಬರೆದ ಮಾತ್ರಕ್ಕೆ ಮಹಾಕವಿಗಳಾಗುವುದಿಲ್ಲ. ಬೆಲೆಬಾಳುವ ಹದಿನೆಂಟು ಸಾಲುಗಳು ಬರೆದರೂ ಮ ಹಾ ಕ ವಿ ಎನ್ನಬೇಕು. ಜಗತ್ತನ್ನು ಒಂದು ಹೆಜ್ಜೆಯಾದರೂ ಮುಂದಕ್ಕೆ ನಡೆಸುವವನು ಮಹಾಕವಿ ; ಹಿಂದಕ್ಕೆ ತಳ್ಳುವವನಲ್ಲ.''



ತೆಲುಗು ಕಾವ್ಯಕ್ಷೇತ್ರಕ್ಕೆ ಐವತ್ತು ವರ್ಷಗಳ ಹಿಂದೆ ಹೊಸತಿರುವನ್ನು ಕೊಟ್ಟು ಇಂದಿಗೂ ಯುವ ಪೀಳಿಗೆಯ ಲೇಖಕರಿಗೆ ಸಂಪೂರ್ಣ ಸ್ಫೂರ್ತಿಯಶಾಗಿ ಉಳಿದಿರುವ ಮಹಾಕವಿ ಶ್ರೀ ಶ್ರೀ ಅವರು ರಾಮಾಯಣ ಭಾರತಗಳಂಥ ಮಹಾಕಾವ್ಯಗಳನ್ನು ಬರೆದಿಲ್ಲ. ಆದರೆ ಅವರ 'ಮಹಾಪ್ರಸ್ಥಾನ' ಎಂಬ ಕವನ ಸಂಕಲನದ ಒಂದೊಂದು ಕವನವೂ ಒಂದು ಮಹಾಕಾವ್ಯ, ಗಾತ್ರದಿಂದಲ್ಲ ; ಗುಣಮಟ್ಟದಿಂದ.

ಶ್ರೀ ಶ್ರೀ (ಶ್ರೀರಂಗಂ ಶ್ರೀನಿವಾಸರಾವ್) ಹುಟ್ಟಿದ್ದು 1910ರಲ್ಲಿ. ಅದೇ ವರ್ಷ ಆಧುನಿಕ ತೆಲುಗು ಕಾವ್ಯಕ್ಕೆ ಆದ್ಯರೆಂದು ಹೆಸರು ಗ ಳಿ ಸಿ ದ ಗುರಜಾಡ ಅಪ್ಪಾರಾವ್ ತಮ್ಮ ಹೊಸರೀತಿಯ ಕವನಗಳನ್ನು ರಚಿಸತೊಡಗಿದರು. ಆಧುನಿಕ ತೆಲುಗು ಕಾವ್ಯದ ಉಗಮದ ಜೊತೆಗೇ ಹುಟ್ಟಿದ ಶ್ರೀ ಶ್ರೀ ತಮ್ಮ 15ನೆಯ ವರ್ಷದಲ್ಲೇ ಕಾವ್ಯರಚನೆಗೆ ತೊಡಗಿದರು. 1930ರ ವರೆಗೆ ತೆಲುಗು ಸಾಹಿತ್ಯ ಶ್ರೀ ಶ್ರೀಯನ್ನು ನಡೆಸಿತು ; ಅಲ್ಲಿಂದೀಚೆಗೆ ಶ್ರೀಶ್ರೀ ತೆಲುಗು ಸಾಹಿತ್ಯವನ್ನು ನಡೆಸುತ್ತಿದ್ದಾರೆ.

ತೆಲುಗಿನ ಪ್ರಗತಿಶೀಲ ಪಂಥಕ್ಕೆ ಶ್ರೀಶ್ರೀ ಆಧ್ಯರು. 1930ರಷ್ಟು ಹಿಂದೆಯೇ ತೆಲುಗಿನಲ್ಲಿ ಪ್ರಗತಿಶೀಲ ಪಂಥದ ಕಾವ್ಯ ಹೊರಬಂತು. 'ಮಹಾಪ್ರಸ್ಥಾನಂ' ಮತ್ತಿತರ ಕವನಗಳನ್ನು ಶ್ರೀ ಶ್ರೀ ಬ ರೆ ದ ಕಾಲದಿಂದ ತೆಲುಗುಕಾವ್ಯದ ಮಾರ್ಗವೇ ಬದಲಾಯಿತು. ಬಡವರ, ದಲಿತರ ಮತ್ತಿತರ ಶೋಷಿತ ವರ್ಗಗಳ ಬಗ್ಗೆ ಕಾವ್ಯಧಾರೆ ಹೊಮ್ಮಿತು. ಶ್ರೀಶ್ರೀ ಕೈಗೆತ್ತಿಕೊಳ್ಳದ ಸಮಸ್ಯೆ ಇಲ್ಲ ; ಕಾವ್ಯ ರೂಪ ಕೊಡದ ವಸ್ತುವಿಲ್ಲ.

ನಾಯಿಮರಿ
ಬೆಂಕಿ ಕಡ್ಡಿ ಆದರೂ ಸರಿ
ಸಾಬೂನಾದರೇನು ಮರಿ ?
ಕಳಪೆ ಎನ್ನಬೇಡ ಯಾವುದನ್ನೂ
ಕಾವ್ಯಮಯವೆಂದು ತಿಳಿ ಎಲ್ಲವನ್ನೂ........

ಎಂದರು ಶ್ರೀ ಶ್ರೀ. ಇವರ ಕಾವ್ಯಕ್ಕೆ ವಸ್ತುಗಳಾದುವು ಸಾಮಾನ್ಯ ಜನರಿಗೆ ಪರಿಚಿತವಾದವು.

''ದಾರಿಪಕ್ಕದ ಮರದ ಕೆಳಗೆ ಬಂಡೆಯಂತೆ ಬಿದ್ದಿರುವ ಅಜ್ಜಿ''ಯ ಸಮಸ್ಯೆ ಒಂದು ಕವನಕ್ಕೆ ವಸ್ತುವಾಯಿತು. ''ಪತಿತರು, ಭ್ರಷ್ಟರು, ಬಾಧಾಸರ್ಪದಷ್ಟರು, ದೀನರು, ಹೀನರು, ಕೂಳಿಲ್ಲದ, ಗೂಡಿಲ್ಲದ ಬಡವರು, ಗೆಳೆಯರಿಂದ ಪರಿಚ್ಯುತರು, ಜನರಿಂದ ತಿರಸ್ಕೃತರು, ಸಂಘದಿಂದ ಬಹಿಷ್ಕೃತರು'' ಅವರ ಇನ್ನೊಂದು ಕವನದ ವಸ್ತು.

ದೇಶ ಚರಿತ್ರೆಗೆ ಶ್ರೀ ಶ್ರೀ ಒಂದು ಕವನದಲ್ಲಿ ಕೊಟ್ಟ ವ್ಯಾಖ್ಯಾನ ಬಹಳ ಮುಖ್ಯವಾದುದು. ಸಾಮಾನ್ಯವಾಗಿ ನಾವು ಇತಿಹಾಸವೆಂದು ತಿಳಿದಿರುವುದೇನು, ತಿಳಿಯಬೇಕಾದುದೇನು ಎಂಬುದನ್ನು ಶ್ರೀ ಶ್ರೀ ಈ ಕವನದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ:

ಯಾವ ದೇಶದ ಚರಿತ್ರೆಯನ್ನು ನೋಡಿದರೂ
ಹೆಮ್ಮೆ ಪಡುವಂಥದೇನಿದೆ ?
ನರಜಾತಿಯ ಚರಿತ್ರೆಯೆಲ್ಲಾ
ಬೇರೊಬ್ಬರ ತುಳಿಯುವುದಲ್ಲವೆ ?
ಬಲವುಳ್ಳವರು ಇಲ್ಲದವರನ್ನು
ಗುಲಾಮರನ್ನಾಗಿಸಿದರು
ಕೊಲೆಗಾರರೇ ಮಹಾರಾಜರಾಗಿ
ಇತಿಹಾಸಪ್ರಸಿದ್ಧರಾದರು
ರಣರಂಗವಾಗದೆಡೆ ಭೂ
ಸ್ಥಳವೆಲ್ಲಾ ಹುಡುಕಿದರೂ ಸಿಗದು :
ಗತವೆಲ್ಲಾ ಒದ್ದೆಯಾಯಿತು ನೆತ್ತರಲ್ಲಿ
ಅಲ್ಲದಿದ್ದರೆ ಕಣ್ಣೀರಲ್ಲಿ.
ಯಾವ ಯುದ್ಧ ಏಕೆ ನಡೆಯಿತು ?

ಹೀಗೆ ಪ್ರಶ್ನಿಸಿದ ಶ್ರೀಶ್ರೀ ತೆಲುಗು ಸಾಹಿತ್ಯದಲ್ಲಿದ್ದ ಸಂಪ್ರದಾಯಗಳ ನಡು ಮು ರಿ ದ ರು "ನೆತ್ತರು, ಕಣ್ಣೀರು ಬೆರೆಸಿ ಹೊಸ ಟಾನಿಕ್ ತಯಾರು ಮಾಡಿದ ಶ್ರೀಶ್ರೀ ಈ ವೃದ್ಧಪ್ರಪಂಚಕ್ಕಾಗಿ."

ಜಗತ್ತಿನ ಪರಿಣಾಮಗಳಿಗೆ ಸ್ಪಂದಿಸುವ ಮನೋಭಾವ ಶ್ರೀಶ್ರೀಯವರದು. ಅ ದ ಕ್ಕೇ ಅ ವ ರು ಪ್ರ ಗ ತಿ ಶೀ ಲ ಕವಿಯಾಗಿ ಉಳಿಯದೆ ಕ್ರಾಂತಿಕಾರಿ ಕ ವಿ ಯಾ ದ ರು. 1970 ರ ಲ್ಲಿ ರೂಪುಗೊಂಡ ಬಂಡಾಯ ಸಂಘಟನೆಯ ಅಧ್ಯಕ್ಷರಾದರು. ತಮ್ಮ ಭಾಷೆ, ಭಾವನೆ, ಛಂದಸ್ಸುಗಳಲ್ಲಿ ಬದಲಾವಣೆ ಮಾಡಿಕೊಂಡರು. ದೀನದಲಿತರಿಗೂ ಅನಕ್ಷರಸ್ಥರಿಗೂ ಅರ್ಥವಾಗುವ ಹಾ ಡು ಗ ಳ ಲ್ಲಿ ಭಾಷೆಯಲ್ಲಿ ಬರೆಯತೊಡಗಿದರು. ಸಾಯುವವರೆಗೂ ಬಂಡಾಯ ಕವಿಯಾಗಿಯೇ ಉ ಳಿ ದ ರು. ವಯಸ್ಸು 70 ದಾಟಿದರೂ 20 ವಯಸ್ಸಿನವರ ಜೊತೆ ಓಡಾಡಿದರು, ಚಳುವಳಿಗಳಲ್ಲಿ ಪಾಲ್ಗೊಂಡರು. ಜೀವನದುದ್ದಕ್ಕೂ ಶೋಷಿತ ವ ರ್ಗ ಗ ಳ ಏಳಿಗೆಗಾಗಿ ಲೇಖನಿ ಹಿಡಿದ ಶ್ರೀ ಶ್ರೀಮಹಾಕವಿ ; ಪ್ರಜಾಕವಿ ; ಕ್ರಾಂತಿಕವಿ. —ಡಾ. ಅರ್ನೈಯಸ್

ಮತ್ತೆ ಸಾವಿನ ದವಡೆಯಲ್ಲಿ 'ದಾರಿದೀಪ' ಪುಟ್ಟರಾಮು

ಏಪ್ರಿಲ್ ತಿಂಗಳ 20ರಂದು ಮಂಡ್ಯದ ಭೂಮಾಲೀಕ ಗೂಂಡಾಗಳ ತೀವ್ರ ಹಲ್ಲೆಯನ್ನೂ ಅರಗಿಸಿಕೊಂಡು ಕೊಲೆಯಿಂದ ಪಾರಾದ 'ದಾರಿದೀಪ' ಪತ್ರಿಕೆಯ ಸಂಪಾದಕ ಶ್ರೀ ಪುಟ್ಟರಾಮುರವರು ನಿಷ್ಕ್ರಿಯ ಪೋಲೀಸರಿಂದಾಗಿ ಈಗ ಸತತ ಕೊಲೆ–ಹಲ್ಲೆ ಸಂಚುಗಳ ನಡುವೆ ಸಿಕ್ಕಿಕೊಂಡಿದ್ದಾರೆ. ಕೊಲೆಯಾದನಂತರ ಕೂಗಾಡುವ ಬದಲು ಎಚ್ಚೆತ್ತ ದಲಿತರು ಮತ್ತು ಪ್ರಗತಿಪರರು ಈ ಕೂಡಲೇ ಈ ಬಗ್ಗೆ ರಾಜ್ಯಾದ್ಯಂತ ಕಾರ್ಯಕ್ರಮ ರೂಪಿಸಿ ಪುಟ್ಟರಾಮುವನ್ನು ಉಳಿಸಬೇಕಾಗಿದೆ.

—ಸಂಪಾದಕ

ಕೆ. ಎನ್. ಗುರುಪ್ರಸಾದ್

ಈ ಹಿಂದೆ 1983 ರ ಮೇ 5 ಮತ್ತು 20 ನೇ ದಿನಾಂಕದಂದು ಬಂದ ಪಂಚಮದ ಎರಡೂ ಸಂಚಿಕೆಗಳಲ್ಲಿ ಮಂಡ್ಯದ ದಾರಿದೀಪ ದಿನಪತ್ರಿಕೆಯ ಸಂಪಾದಕರಾದ ದಲಿತ ಪತ್ರಕರ್ತ ಶ್ರೀ ಎಸ್. ಪುಟ್ಟರಾಮು ಮೇಲೆ ನಡೆದ ಹಲ್ಲೆ ಮತ್ತು ಕೊಲೆಗಡುಕ ಹಲ್ಲೆಕೋರರ ಮುಂದುವರಿದ ದಬ್ಬಾಳಿಕೆಯ ಬಗ್ಗೆ ಬರೆಯಲಾಗಿತ್ತು. ಈಗ ಮತ್ತೆ ಮರಕಾಡುದೊಡ್ಡಿಯ ಕೊಲೆಗಡುಕ ಹಿಂದೂಗಳು ತಮ್ಮ ದಬ್ಬಾಳಿಕೆ ದೌರ್ಜನ್ಯಗಳೆಂಬ ಚಾಕು ಚೂರಿಗಳನ್ನೂ, ಹಸಿರು ಟವಲ್ (ರೈತಸಂಘದ ಸಂಕೇತ) ಎಂಬ ಗುರಾಣಿಯನ್ನು ಹಿಡಿದುಕೊಂಡು ಪುಟ್ಟರಾಮುಗೆ ಚಿತ್ರಹಿಂಸೆ ಕೊಡುತ್ತಿರುವುದಲ್ಲದೆ ಅವರನ್ನು ಕೊಲ್ಲುವ ಹವಣಿಕೆಯಲ್ಲೂ ಇದ್ದಾರೆ. ಅಂದಿನಿಂದ ಇಂದಿನವರೆಗೂ ಪ್ರತಿದಿನ ಒಂದಲ್ಲ ಒಂದು ಕಾರಣ ತೆಗೆದು ಕಾಲು ಕೆರೆದು ಜಗಳ ಮಾಡುತ್ತಿದ್ದಾರೆ. ದಿನಾಂಕ 20–4–83 ರಂದು ಮರಕಾಡುದೊಡ್ಡಿಯ ನಾಥೇಗೌಡ, ಮೊಳ್ಳಯ್ಯ ಮತ್ತು ಸಾತನೂರಿನ ಗೂಂಡಾಗಳಿಂದ ತೀವ್ರ ಹಲ್ಲೆಗೊಳಗಾಗಿದ್ದ ಪುಟ್ಟರಾಮು ಆಸ್ಪತ್ರೆ ಸೇರಿದ್ದರು. ಆಸ್ಪತ್ರೆಯಿಂದ 25-5-83 ರಂದು ಬಿಡುಗಡೆ ಹೊಂದಿದ ಪುಟ್ಟರಾಮು ಮತ್ತೆ ಪ್ರೆಸ್ಸಿನ ಕೆಲಸ ಪ್ರಾರಂಭಿಸಲು ಸುಮಾರು 20 ದಿನಗಳೇ ಬೇಕಾಯ್ತು.

ರೈತಸಂಘದವರಿಂದ ಬೆದರಿಕೆ

ಪುಟ್ಟರಾಮು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ಹಿಂದಿನ ದಿನ ಅಂದರೆ ದಿನಾಂಕ 24-5-83ರಂದು ಮರಕಾಡುದೊಡ್ಡಿಯಲ್ಲಿ ರೈತಸಂಘ ರಚನೆಯಾಯ್ತು. 25–5–83 ರಂದು ಪುಟ್ಟರಾಮು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದರು. ಇವರ ಮೇಲೆ ಹಲ್ಲೆ ನಡೆದ ದಿನದಿಂದಲೂ ಇವರ ಮನೆಯ ಹತ್ತಿರ ಪೋಲೀಸ್ ಕಾವಲನ್ನು ಹಾಕಲಾಗಿತ್ತು. ಆ ಪೋಲೀಸಿನವರು ಪುಟ್ಟರಾಮುವಿನ ಗುಡಿಸಲ ಮುಂದೆ ಮಲಗಲು ಸ್ಥಳವಿಲ್ಲದ್ದರಿಂದ ಪುಟ್ಟರಾಮುವಿನ ಗುಡಿಸಲ ಹಿಂದೆ ಸುಮಾರು 100 ಗಜ ದೂರದಲ್ಲಿ ಒಬ್ಬ ಬಡವನ ಗುಡಿಸಲ ಜಗಲಿಯ ಮೇಲೆಯೇ ಅಂದಿನಿಂದಲೂ ಮಲಗುತ್ತಿದ್ದರು. ಪುಟ್ಟರಾಮು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ಮಾರನೆ ದಿನದ ರಾತ್ರಿಯೂ (26-5-83 ರಂದು) ಎಂದಿನಂತೆ ಪೋಲೀಸಿನವರು ಮಲಗಿದ್ದರು. ಊರೆಲ್ಲಾ ಮಲಗಿದ ನಂತರ ರೈತಸಂಘದವರೆನಿಸಿಕೊಂಡ ಕೆಲವು ಕಿಡಿಗೇಡಿ ಯುವಕರು ಪೋಲೀಸರನ್ನು ಎಬ್ಬಿಸಿ "ನೀವು ಇಲ್ಲಿ ಮಲಗಕೂಡದು, ಪುಟ್ಟರಾಮುವಿನ ಮನೆ ಕಾಯಲು ಬಂದಿರುವ ನೀವು ಅವನ ಮನೆಯ ಮುಂದೆಯೇ ಹಗಲು ವೇಳೆ ಕುಳಿತುಕೊಳ್ಳಿ, ರಾತ್ರಿ ವೇಳೆ ಮಲಗಿಕೊಳ್ಳಿ. ಬೇರೆಯವರ ಮನೆಯ ಮುಂದೆ ಕೂರುವುದಾಗಲೀ ಮಲಗುವುದಾಗಲೀ ಮಾಡಕೂಡದೆಂದು ಕಟ್ಟಪ್ಪಣೆ ವಿಧಿಸಿದರು. ಹೇಳಿ ಕೇಳಿ ಪುಟ್ಟರಾಮು ಒಬ್ಬ ಬಡವ. ತನ್ನ ಗುಡಿಸಲಿಗೆ ಸರಿಯಾಗಿ ಸೂರು ಹೊದಿಸಲು ಸಾಧ್ಯವಾಗದೇನೆ ಮಳೆ ಬಂದಾಗ ಹೆಂಡತಿ ಮಕ್ಕಳೊಡನೆ ನೆನೆಯಬೇಕಾಗಿರುವ ಪುಟ್ಟರಾಮು ಪೋಲೀಸಿನವರಿಗಾಗಿ ಬೇರೊಂದು ಗುಡಿಸಲು ಹಾಕಲು ಸಾಧ್ಯವಿದೆಯೆ ? ಹೀಗೆ ಒಂದಿಲ್ಲೊಂದು ಕುಂಟು ನೆಪ ತೆಗೆದು ಜಗಳ ಕಾದು ಪುಟ್ಟರಾಮುಗೆ ಚಿತ್ರಹಿಂಸೆ ಕೊಡಲು ಹಲ್ಲೆಕೋರರು ಪ್ರಯತ್ನಿಸತೊಡಗಿದರು.

15–6–82ರಂದು ಎಂದಿನಂತೆ ಪುಟ್ಟರಾಮು ಬೆಳಿಗ್ಗೆ ಎದ್ದು ಪ್ರೆಸ್ಸಿಗೆ ಬಂದರು. ಅದೇ ದಿನ ಮರಕಾಡುದೊಡ್ಡಿಯ ರೈತಸಂಘದ ಧುರೀಣರೆನಿಸಿಕೊಂಡ ಮಹದೇವಮ್ಮನ ಮಗ ಮರಿಚೆನ್ನ, ಬುಸಿಯನರಾಮು ಮತ್ತು ನಾಥೇಗೌಡನ ಮೊಮ್ಮಗ ರಮೇಶ ತಮ್ಮ ಎಮ್ಮೆ ದನ–ಕರುಗಳನ್ನು ಪುಟ್ಟರಾಮುವಿನ ಜಮೀನಿಗೆ ಬಿಟ್ಟು ಮೇಯಿಸುತ್ತಿದ್ದರು. ಆ ಜಮೀನಿನಲ್ಲಿದ್ದ ಸರ್ವೆಸಸಿಗಳು ಹಾಳಾಗುತ್ತಿರುವುದನ್ನು ಕಂಡ ಪುಟ್ಟರಾಮುವಿನ ಹೆಂಡತಿ ಎಮ್ಮೆ ದನ–ಕರುಗಳನ್ನು ತಮ್ಮ ಜಮೀನಿನಿಂದ ಹೊರಗೆ ಹಿಡಿದುಕೊಂಡು ಮೇಯಿಸಿ ಎಂದು ಮೇಲ್ಕಂಡ ಸವರ್ಣೀಯರಿಗೆ ಹೇಳಿದಳು. ಇದಿಷ್ಟೆ ಕಾರಣ ಸಾಕಾಯ್ತು ಜಗಳ ಮಾಡಲು. ಅವಾಚ್ಯ ಶಬ್ದದಿಂದ ಬೈಯುತ್ತಾ "ಜಮೀನು ನಿಮ್ಮಪ್ಪಂದಲ್ಲ" ಎಂದು ಜಗಳ ಮಾಡಲು ಸುರುಮಾಡಿದರು. ಮಾತಿಗೆ ಮಾತು ಬೆಳೆಯುತ್ತಾ ಹೋಯ್ತು. ಅಷ್ಟರಲ್ಲಿ ವಿಷಯ ತಿಳಿದ ಮಾನವೀಯತೆಯುಳ್ಳ ಕೆಲವು ಸವರ್ಣೀಯರು ಮಧ್ಯೆ ಬಂದು ಈ ರೀತಿ ಹೆಂಗಸಿನ ಮೇಲೆ ಜಗಳ ಮಾಡುವುದು ಸರಿಯಲ್ಲ ಎಂದು ಮೇಲ್ಕಂಡ ಹಲ್ಲೆಕೋರರಿಗೆ ಬೈದು ಬುದ್ಧಿ ಹೇಳಿ ದನ-ಕರುಗಳನ್ನು ಪುಟ್ಟರಾಮುವಿನ ಜಮೀನಿನಿಂದ ಹೊರಗೆ ಹಟ್ಟಿದರು. ಈ ಕಡೆ ಅದೇ ದಿನ ಪುಟ್ಟರಾಮು ತಮ್ಮ ದಾರಿದೀಪ ಪತ್ರಿಕೆಯಲ್ಲಿ ಮಂಡ್ಯಜಿಲ್ಲಾ ರೈತ ಹೋರಾಟ ಸಮಿತಿಯ ಅಧ್ಯಕ್ಷರಾದ ಎಸ್. ಡಿ. ಜಯರಾಂರವರಿಗೊಂದು ಬಹಿರಂಗ ಪತ್ರವನ್ನು "ಹಸಿರು ಟವಲ್ಲಿನ ಆಶ್ರಯದಲ್ಲಿ ಸಮಾಜ ದ್ರೋಹಿಗಳ ಬೆಳವಣಿಗೆಯಾಗುತ್ತಿದೆ" ಎಂಬ ತಲೆಬರಹದಡಿಯಲ್ಲಿ ಲೇಖನ ಬರೆದು ಪ್ರಕಟಿಸಿದರು. ಪ್ರೆಸ್ಸಿನಲ್ಲಿದ್ದ ಪುಟ್ಟರಾಮುಗೆ ಅವರ ಹೆಂಡತಿ–ಮಕ್ಕಳು ಓಡಿಬಂದು ಮನೆಯ ಹತ್ತಿರ ನಡೆದ ಗಲಾಟೆಯ ಬಗ್ಗೆ ತಿಳಿಸಿದಾಗ ಅದೇ ದಿನ ಪುಟ್ಟರಾಮು ಗಲಾಟೆ ಮಾಡಿದವರ ಮೇಲೆ ಮಂಡ್ಯ ರೂರಲ್ ಪೋಲೀಸ್ ಠಾಣೆಗೆ ದೂರು ನೀಡಿದರು.

ನಿಷ್ಕ್ರಿಯ ಪೊಲೀಸ್ ಅಧಿಕಾರಿಗಳು

ಈ ಹಿಂದೆ ಪುಟ್ಟರಾಮು ಮೇಲೆ ಹಲ್ಲೆ ನಡೆಸಿದವರ ಪರವಾಗಿದ್ದನೆನ್ನಲಾದ ಮಹಾಜಾತಿವಾದಿ ಸಬ್‌ಇನ್ಸ್‌ಪೆಕ್ಟರ್ ರಾಮಲಿಂಗು ಕೆ. ಆರ್. ಎಸ್‌ಗೆ ವರ್ಗವಾದ ನಂತರ ಹೊಸದಾಗಿ ಬಂದಿರುವ ಮುದ್ದಯ್ಯನೆಂಬ ಸಬ್‌ಇನ್ಸ್‌ಪೆಕ್ಟರ್ ಪುಟ್ಟರಾಮು ಕೊಟ್ಟ ದೂರನ್ನು ತೆಗೆದುಕೊಂಡು "ನಿಮ್ಮದು ಯಾವಾಗಲೂ ಇದ್ದೇ ಇದೆ" ಎಂದು ಗೊಣಗುತ್ತಾ ಓದಿ ನೋಡಿ "ನೀವು ದೂರು ಕೊಟ್ಟಿರುವ ವ್ಯಕ್ತಿಗಳ ಮೇಲೆ ಈಗಾಗಲೇ ಎಲ್ಲಾ ರೀತಿಯ ಕೇಸುಗಳನ್ನು ಹಾಕಲಾಗಿದೆ. ನಾನೇನು ಮಾಡ್ಲಿ" ಎಂದು ಪುಟ್ಟರಾಮುವನ್ನೇ ಪ್ರಶ್ನಿಸಿ ತಲೆಯ ಮೇಲೆ ಕೈ ಹೊತ್ತು ಕುಳಿತುಕೊಂಡನು. ಆ ದಿನ ಅಲ್ಲಿ ಇದ್ದ ಪ್ಯಾಕ್ಟ್ರಿ ಔಟ್ ಪೋಲೀಸ್ ಸ್ಟೇಷನ್ನಿನ ದಫೇದಾರ

ಮಾಸ್ತಿಗೌಡನನ್ನು ಕರೆದು "ಇದರಲ್ಲಿರುವ ವ್ಯಕ್ತಿಗಳನ್ನು ಕರೆದು ವಿಚಾರಣೆ ನಡೆಸು ಎಂದು ಪುಟ್ಟರಾಮು ಕೊಟ್ಟಿದ್ದ ದೂರನ್ನು ಅವನ ಕೈಗೊಪ್ಪಿಸಿ ತನ್ನ ಕೈ ತೊಳೆದುಕೊಂಡನು. ಈ ಮೊದಲೇ ಹಲ್ಲೆಕೋರರಿಂದ ಎಂಜಲು ತಿಂದು ನಿಷ್ಕ್ರಿಯನಾಗಿ ಕುಳಿತಿದ್ದ ದಫೇದಾರ್ "ಇದು ನನ್ನಿಂದ ಆಗದ ಕೆಲಸ ಸಾರ್, ನಾವು ಆ ಊರಿನೊಳಗೆ ಹೋಗುತ್ತಿದ್ದರೆ ಅಲ್ಲಿರುವ ರೈತಸಂಘದ ಪುಂಡುಹುಡುಗರು ಲೆಫ್ಟ್–ರೈಟ್, ಲೆಫ್ಟ್–ರೈಟ್ ಎಂದು ನಮಗೆ ಹೇಳುತ್ತಾರೆ. ಅವರು ನನ್ನ ಮಾತನ್ನು ಕೇಳೋಲ್ಲ, ನೀವೆ ಬಂದು ವಿಚಾರಣೆ ನಡೆಸಬೇಕು" ಅಂತ ಇನ್ಸ್‌ಪೆಕ್ಟರ್ ಮುದ್ದಯ್ಯನನ್ನೇ ಕೇಳಿಕೊಳ್ಳುತ್ತಿದ್ದ. ಇನ್ಸ್‌ಪೆಕ್ಟರ್ "ಆಗೋದಿಲ್ಲ ಕಣಯ್ಯ ನೀನೆ ಮಾಡು" ಎಂದು ಹೇಳಿದ. ಹೀಗೆ ದಫೇದಾರ ಮಾಸ್ತೀಗೌಡ "ನೀವೇ ಬನ್ನಿ ಸಾರ್" ಅಂತ ಕೊಸರಾಡ್ತನೇ ಇದ್ದ. ಇನ್ಸ್‌ಪೆಕ್ಟರ್ ಮುದ್ದಯ್ಯ "ಆಗೊಲ್ಲ ಕಣಯ್ಯ ನೀನೆ ವಿಚಾರಣೆ ನಡೆಸು" ಅಂತ ಹೊಸಗಾಡ್ತನೇ ಇದ್ದ. ಈ ಸಮಯದಲ್ಲಿ ಪುಟ್ಟರಾಮು ಜೊತೆ ನಾನೂ ಕೂಡ ಇದ್ದೆ. ಇವರ ಕೊಸರಾಟ–ಹೊಸಗಾಟ ನಡೆಯುತ್ತಲೇ ಇತ್ತು. ಕೊನೆಗೆ ಪುಟ್ಟರಾಮು ಮತ್ತು ನಾನೂ ಇಬ್ಬರು ಮೇಲೆದ್ದು "ಒಟ್ಟಿನಲ್ಲಿ ಯಾರಾದರೂ ವಿಚಾರಣೆ ನಡೆಸಿ" ಎಂದು ಹೇಳಿ ಪೋಲಿಸ್ ಠಾಣೆಯಿಂದ ಹೊರಗೆ ಬಂದೆವು.

ಕೊಲೆಯ ಬೆದರಿಕೆ

ಮಾರನೆದಿನ 16-6-83ರಂದು ಪೋಲೀಸ್‌ನವರು ಪೋಲೀಸ್ ಠಾಣೆಗೆ ಗಲಾಟೆ ಮಾಡಿದವರನ್ನು ಕರೆಸುವ ತಾಕತ್ತಿಲ್ಲದೆ ಅವರವರ ಮನೆಯ ಹತ್ತಿರಕ್ಕೆ ಬಂದು ವಿಚಾರಣೆಯ ನಾಟಕ ಮುಗಿಸಿಕೊಂಡು ಹೋದರು. ಈ ವಿಚಾರಣೆಯಿಂದ ಕೋಪಗೊಂಡ ಹಲ್ಲೆಕೋರ ಕೊಲೆಗಡುಕರಲ್ಲಿ ಒಬ್ಬನಾದ ಮಹದೇವಮ್ಮನ ಮಗ ಮರಿಚೆನ್ನ ಎಂಬುವನು ಪುಟ್ಟರಾಮು ಮನೆಯಲ್ಲಿರುವ ಸಂದರ್ಭದಲ್ಲಿ ಕೈಯಲ್ಲಿ ಕುಡುಗೋಲು ಹಿಡಿದುಕೊಂಡು ಬಂದು ಮನೆಯ ಹತ್ತಿರ ಗಲಾಟೆ ಮಾಡಿ ಅವಾಚ್ಯ ಶಬ್ದದಿಂದ ಬೈಯುತ್ತಾ ಇನ್ನೊಂದು ಸಾರಿ ಪೋಲಿಸ್ ಕಂಪ್ಲೇಂಟ್ ಕೊಟ್ಟರೆ ನಿನ್ನನ್ನು ಕತ್ತರಿಸಿ ಹಾಕುವುದಾಗಿ ಕೊಲೆ ಬೆದರಿಕೆ ಹಾಕಿ ಹೊರಟು ಹೋದ.

ಕೊಲೆ ಮಾಡಲು ಸಂಚು

ಮಾರನೆ ದಿನ 17-6-83ರಂದು ಪುಟ್ಟರಾಮು ಪ್ರೆಸ್ಸಿನ ಕೆಲಸ ಮುಗಿಸಿಕೊಂಡು ರಾತ್ರಿ ಸುಮಾರು 8 ಗಂಟೆಗೆ ತಮ್ಮ ಗ್ರಾಮ ಮರಕಾಡುದೊಡ್ಡಿಗೆ ಆಟೋದಲ್ಲಿ ಹೊರಟರು. ಆ ಕಡೆ ಮರಕಾಡು ದೊಡ್ಡಿಯಲ್ಲಿ ಕೊಲೆಯ ಬೆದರಿಕೆ ಹಾಕಿದ್ದ ಮರಿಚೆನ್ನ, ಮೇಸ್ತ್ರಿನಿಂಗಯ್ಯನ ಮಗ ರಾಜ, ಬುಸಿಯನ ಮಗ ರಾಮಚಂದ್ರ, ನಾಥೇಗೌಡನ ಮೊಮ್ಮಗ ರಮೇಶ, ಮೊರ್ಲ್ಲಾಡಿನಿಂಗನ ಮಗ ವೆಂಕಟೇಶ ಇನ್ನೂ ಮುಂತಾದ ರೈತಸಂಘದ ಧುರೀಣರೆನಿಸಿಕೊಂಡ ಕೊಲೆಗಡುಕರೆಲ್ಲಾ ಒಂದುಕಡೆ ಸೇರಿ ಈ ದಿನ ಹೊಲೇರ ಪುಟ್ಟರಾಮನ್ನ ಮುಗಿಸಿಬಿಡೋಣ ಎಂದು ತೀರ್ಮಾನ ತೆಗೆದುಕೊಂಡರು. ಕೂಡಲೇ ಕೊಡ್ಲಿ–ಮಚ್ಚುಗಳನ್ನು ಮಸೆದುಕೊಂಡು ದೊಣ್ಣೆಗಳನ್ನು ಸಿದ್ಧ ಮಾಡಿಕೊಂಡರು. ಊರಿನ ಬೀದಿದೀಪಗಳ ಸ್ವಿಚ್ ಆಫ್ ಮಾಡಿ ಇಡೀ ಊರನ್ನೇ ಕತ್ತಲಲ್ಲಿ ಮುಳುಗಿಸಿದರು. ಪುಟ್ಟರಾಮು ಬರುವ ವೇಳೆಗಾಗಿ ಊರಿನ ಆಚೆ ಸ್ವಲ್ಪ ದೂರದಲ್ಲೇ ಭೇಟೆಗಾಗಿ ಕಾಯುತ್ತಾ ಕುಳಿತರು. ಈ ವಿಷಯ ತಿಳಿದ ಶ್ರೀನಿವಾಸಪುರದ ಕೆಲವು ಸವರ್ಣೀಯ ಯುವಕರು ಗರೀಬಿ ಹಠಾವಿನ 3 ಜನ ಗಂಡಸರು ಮತ್ತು ಪುಟ್ಟರಾಮುವಿನ ಹೆಂಡತಿಯೂ ಸೇರಿದಂತೆ ಈ ಕೊಲೆಗಡುಕರ ಕಣ್ಣಿಗೆ ಕಾಣಿಸದಂತೆ ಗದ್ದೆ ಬಯಲಿನಲ್ಲಿ ಬಿದ್ದು ಅವರಿಗಿಂತಲೂ ಮುಂದೆ ರಸ್ತೆಯ ಬದಿಯಲ್ಲಿ ಅಡಗಿದ್ದು ಪುಟ್ಟರಾಮು ಕುಳಿತಿದ್ದ ಆಟೋ ಬಂದ ತಕ್ಷಣ ಆಟೋ ತಡೆದು ಪುಟ್ಟರಾಮುಗೆ ವಿಷಯ ತಿಳಿಸಿ ಬೇರೆ ದಾರಿಯಲ್ಲಿ ಮನೆಗೆ

ವಿಶೇಷ ವರದಿ

ಕರೆತಂದು ಇಡೀ ರಾತ್ರಿ ಅವರ ಮನೆ ಮುಂದೆ ಕಾವಲು ಕುಳಿತರು.

ಅಕ್ಕಿಲೇಶ್ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಯೆ ?

ಅಂತೂ ಕೊನೆಗೂ ಕೆಲವು ಪ್ರಾಮಾಣಿಕ ಮಾನವೀಯತೆಯುಳ್ಳ ಸವರ್ಣೀಯರಿಂದಾಗಿ ಆ ದಿನ ನಡೆಯಬೇಕಾಗಿದ್ದ ಪುಟ್ಟರಾಮುವಿನ ಕೊಲೆ ತಪ್ಪಿ ಮಾರನೆದಿನ ಬೆಳಿಗ್ಗೆ 18-6-83ರಂದು ಹೊಸದಾಗಿ ಬಂದಿರುವ ಜಿಲ್ಲಾ ರಕ್ಷಣಾಧಿಕಾರಿಯಾದ ಶ್ರೀ ಅಕ್ಕಿಲೇಶ್‌ರವರಿಗೆ ಈ ಕೊಲೆಯ ಸಂಚಿನ ಬಗ್ಗೆ ದೂರು ನೀಡಲಾಗಿದೆ. ಸೂಕ್ತಕ್ರಮ ಕೈಗೊಳ್ಳುವುದಾಗಿ ಶ್ರೀ ಅಕ್ಕಿಲೇಶ್ ಭರವಸೆ ನೀಡಿದ್ದಾರೆ. ಕನ್ನಡ ಮಾತನಾಡಲು ತೊದಲುವ ಈ ತರುಣ ಅಧಿಕಾರಿ ಪುಟ್ಟರಾಮು ಪ್ರಕರಣದ ಹಿಂದಿನ ಘಟನೆಗಳನ್ನೆಲ್ಲಾ ಕೂಲಂಕುಶವಾಗಿ ತಿಳಿದುಕೊಂಡು ರಾಜಕೀಯದ ಬಲೆಗೆ ಬೀಳದೆ ಜಾತೀವಾದಿಗಳ ಎಂಜಲಿಗೆ ಕೈ ಒಡ್ಡದೆ ಮುಂದೆ ಎಂದಾದರೂ ನಡೆಯಬಹುದಾದ ದಲಿತ ಪತ್ರಕರ್ತ ಪುಟ್ಟರಾಮುವಿನ ಕೊಲೆಯನ್ನು ತಪ್ಪಿಸಲು ಸೂಕ್ತಕ್ರಮ ಕೈಗೊಳ್ಳಬೇಕಾಗಿದೆ. ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಯೆಂದು ಹೆಸರು ಗಳಿಸಿರುವ ಇವರು ಯಾವ ರೀತಿ ಕ್ರಮ ಕೈಗೊಳ್ಳುತ್ತಾರೆಂದು ಕಾದು ನೋಡಬೇಕಾಗಿದೆ

ಕೊಲೆಯ ಬೆದರಿಕೆ ಹೊತ್ತ ಅನಾಮಧೇಯ ಪತ್ರ

ಈ ನಡುವೆ ಪುಟ್ಟರಾಮುಗೆ ಅನಾಮಧೇಯ ಪತ್ರವೊಂದು ಬಂದಿದ್ದು ಅದರಲ್ಲಿ ಮಂಡ್ಯದ ಹೆಸರಾಂತ ರೌಡಿಗಳ ಹೆಸರುಗಳೂ, ಸಾತನೂರಿನ ಗೂಂಡಾಗಳ ಹೆಸರುಗಳೂ, ಮತ್ತು ಮರಕಾಡು ದೊಡ್ಡಿಯ ಕೊಲೆಗಡುಕರ ಹೆಸರುಗಳೂ ಇದ್ದು ಚಾಕು–ಚೂರಿ ಬ್ಲೇಡಿನಿಂದ ನಿನ್ನ ಮೈಯನ್ನು ಕೊಯ್ಯುವುದಲ್ಲದೆ ಇಷ್ಟರಲ್ಲೇ ನಿನ್ನನ್ನು ರಸ್ತೆ ಕಾದಿದ್ದು ಕೊಲೆ ಮಾಡುವುದಾಗಿ ಬೆದರಿಸಿ ಜಾತಿಯ ಹೆಸರಿಡಿದು ಹೀನಾಮಾನವಾಗಿ ಬೈದು ಬರೆಲಾಗಿದೆ.

ಮುಂದೆ ನಡೆಯಬಹುದಾದ ಕೊಲೆಗೆ ಹೊಣೆ ಯಾರು ??

ದಲಿತ ಪತ್ರಕರ್ತ ಪುಟ್ಟರಾಮು ತನ್ನ ಮೇಲೆ ನಡೆದ ಹಲ್ಲೆ ಮತ್ತು ಕೊಲೆ ಯತ್ನದ ಬಗ್ಗೆ ಈ ಮೊದಲೇ ನಮ್ಮ ರಾಜ್ಯದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರಿಗೂ, ವಾರ್ತಾಸಚಿವರಾದ ರಘುಪತಿಯವರಿಗೂ ಮತ್ತು ಎಲ್ಲಾ ಉನ್ನತ ಪೋಲೀಸ್ ಅಧಿಕಾರಿಗಳಿಗೂ ಪತ್ರ ಬರೆದು ತಿಳಿಸಿದ್ದಾರಲ್ಲದೆ ಮುಖ್ಯಮಂತ್ರಿ ಹೆಗಡೆ ಮತ್ತು ರಘುಪತಿಯವರಿಂದ ಸೂಕ್ತಕ್ರಮ ತೆಗೆದುಕೊಂಡು ರಕ್ಷಣೆ ಒದಗಿಸುವುದಾಗಿ ಪ್ರತಿ ಉತ್ತರದ ಪತ್ರವನ್ನೂ ಪಡೆದಿದ್ದಾರೆ. ಆದರೂ ಎರಡನೆಯ ಬಾರಿ ಅವರ ಕೊಲೆಯ ಯತ್ನ ನಡೆದಿದೆ. ಎರಡನೆಯ ಬಾರಿಯು ಕೊಲೆಗಡುಕರ ಕೊಡ್ಲಿ–ಮಚ್ಚುಗಳಿಂದ ತಪ್ಪಿಸಿಕೊಂಡಿರುವ ಶ್ರೀ ಪುಟ್ಟರಾಮುರವರು ಸಾವಿನ ದವಡೆಯಲ್ಲಿ ಸಿಕ್ಕಿಕೊಂಡು ಸಯುವ ಗಳಿಗೆಗಳನ್ನು ಎಣಿಸುತ್ತಿದ್ದಾರೆ. ಒಂದುವೇಳೆ ಮುಂದೆ ಎಂದಾದರೂ ದಲಿತ ಪತ್ರಕರ್ತ ಪುಟ್ಟರಾಮುರವರ ಕೊಲೆಯಾದರೆ ಆ ಕೊಲೆಗೆ ನಮ್ಮ ಮುಖ್ಯಮಂತ್ರಿ ಹೆಗಡೆ, ರಘುಪತಿ, ಮಂಡ್ಯ ಜಿಲ್ಲಾಧಿಕಾರಿ ಆಚಾರ್ಯ ಮತ್ತು ಉನ್ನತ ಪೋಲೀಸ್ ಅಧಿಕಾರಿಗಳೇ ಹೊಣೆಗಾರರಾಗುತ್ತಾರೆ.

ಹಸಿವು

ಸೋನೇಮಳೆಯ
ತರಥರದ ಮಬ್ಬು ತೆರೆಗಳ ನಡುವೆ
ಕಂಪೊಡಲ ಸೀಳುತ್ತ ಸಾಗಿದ್ದ ನೇಗಿಲು
ಏಕೋ ಕೆಂಪಾಯ್ತು ಅಲ್ಲೇ ನಿಂತಿತು
ಹಸಿರು ತಲೆಮೇಲೆ ಮುಸುಕೊದ್ದು ಕುಳಿತಿತು.

—ದಾರಿದೀಪ ಪುಟ್ಟರಾಮು

ಚುನಾವಣಾ ಪ್ರಕಟಣೆ

ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಮಳವಳ್ಳಿ, ಮತ್ತು ಬೆಳಕವಾಡಿ ಪುರಸಭಾ ಸದಸ್ಯರುಗಳ ಚುನಾವಣೆಯ ನಿರ್ವಚನಾಧಿಕಾರಿಯ ಕಾರ್ಯಾಲಯ, ಮಳವಳ್ಳಿ.

ನಂ : ಇ. ಎಲ್. ಎನ್. ಎಂ. ಯು. ಎನ್. ಸಿ. ಆರ್. 5–83.84 ದಿನಾಂಕ 28 ನೇ ಜೂನ್ 1983.

1977 ನೇ ಇಸವಿ ಕರ್ನಾಟಕ ಪುರಸಭೆಗಳ (ಸದಸ್ಯರುಗಳ) ಚುನಾವಣೆ ನಿಯಮದ 8(1)ರ ಅನ್ವಯ ಮತ್ತು ನನಗೆ ಮಂಡ್ಯ ಜಿಲ್ಲಾಧಿಕಾರಿಯವರ ಕಛೇರಿಯ ನೋಟಿಫಿಕೇಷನ್ ನಂ : ಇ. ಎಲ್. ಎನ್. ಸಿ. ಆರ್. 105–82.83 ದಿನಾಂಕ : 24 ನೇ ಜೂನ 1983 ರಲ್ಲಿ ಸೂಚಿಸಿರುವಂತೆ ನನಗೆ ದತ್ತವಾದ ಅಧಿಕಾರದಂತೆ ಮಳವಳ್ಳಿ ತಾಲ್ಲೂಕು ಕ್ಷೇತ್ರಾಭಿವೃದ್ಧಿ ಅಧಿಕಾರಿ ಹಾಗೂ ಬೆಳಕವಾಡಿ ಪುರಸಭಾ ಸದಸ್ಯರುಗಳ ಚುನಾವಣೆಯ ನಿರ್ವಚನಾಧಿಕಾರಿಯಾದ ವಿ. ಮುನಿವೆಂಕಟಪ್ಪ ಆದ ನಾನು ಈ ಕೆಳಗೆ ನಮೂದಿಸಿರುವ ಫಾರ ನಂ. 1 ರಲ್ಲಿ ಬೆಳಕವಾಡಿ ಪುರಸಭೆಯ ಸದಸ್ಯರುಗಳ ಚುನಾವಣೆಗಾಗಿ ಚುನಾವಣೆ ವೇಳಾಪಟ್ಟಿಯನ್ನು ಬೆಳಕವಾಡಿ ಮತದಾರರ ಮತ್ತು ಸಮಸ್ತ ಸಾರ್ವಜನಿಕರ ಅವಗಾಹನೆ ಬಗ್ಗೆ ಈ ಮೂಲಕ ಪ್ರಚುರಪಡಿಸಿರುತ್ತೇನೆ.

ಫಾರಂ ನಂ. 1 (ರೂಲ್ ನಂ 8 (2) ನ್ನು ನೋಡಿ)

ಬೆಳಕವಾಡಿ ಪುರಸಭೆಯ ಸದಸ್ಯರುಗಳ ಚುನಾವಣೆ. ಈ ಮೂಲಕ ತಿಳಿಯಪಡಿಸುವುದೇನೆಂದರೆ.

1. ಬೆಳಕವಾಡಿ ಪುರಸಭೆಯ ಪ್ರತಿ ಡಿವಿಜನ್ನಿನಿಂದಲೂ ಚುನಾಯಿತರಾಗಬೇಕಾದ ಸದಸ್ಯರ ಸಂಖ್ಯೆಯನ್ನು ಈ ಕೆಳಗೆವಿವರಿಸಲಾಗಿದೆ

ಜುಂಜರು ನಂಬರು.	ಡಿವಿಜನ್ ನಂಬರು.	ಒಟ್ಟು ಸ್ಥಾನಗಳು	ನಿಮ್ನವರ್ಗದವರಿಗೆ ಮೀಸಲಾಗಿರುವ ಸ್ಥಾನಗಳು	ಮಹಿಳೆಯರಿಗೆ ಮೀಸಲಾಗಿರುವ ಸ್ಥಾನಗಳು
1.	1ನೇ ಡಿವಿಜನ್	5	1	1
2.	2ನೇ ಡಿವಿಜನ್	5	1	1
3.	3ನೇ ಡಿವಿಜನ್	5	–	1
	ಜುಮ್ಲಾ	15	2	3

2. ನಿಮ್ನ ವರ್ಗದವರಿಗೆ ಮತ್ತು ಮಹಿಳೆಯರಿಗೆ ಮೀಸಲಿಟ್ಟಿರುವ ಸ್ಥಾನಗಳು ಮತ್ತು ಡಿವಿಜನ್‌ಗಳು :—

(ಅ) ನಿಮ್ನವರ್ಗದವರಿಗೆ : 2 (ಒಂದನೇ ಡಿವಿಜನ್‌ನಲ್ಲಿ 1 ಮತ್ತು ಎರಡನೇ ಡಿವಿಜನ್‌ನಲ್ಲಿ 1 ಜುಮ್ಲಾ 2)

(ಆ) ಮಹಿಳೆಯರಿಗೆ: 3 (ಒಂದನೇ ಡಿವಿಜನ್‌ನಲ್ಲಿ 1 ಎರಡನೇ ಡಿವಿಜನ್‌ನಲ್ಲಿ 1 ಮತ್ತು ಮೂರನೇ ಡಿವಿಜನ್‌ನಲ್ಲಿ 1 ಜುಮ್ಲಾ 3)

3. ಉಮೇದುವಾರಿಕೆ ನಾಮ ನಿರ್ದೇಶನ ಪತ್ರವನ್ನು ಚುನಾವಣೆಯ ನಿರ್ವಚನಾಧಿಕಾರಿಯವರ (ಬೆಳಕವಾಡಿ ಪುರಸಭಾ) ಕಛೇರಿಯಲ್ಲಿ ಫಾರಂ ನಂ. 7ರಲ್ಲಿ ನಮೂದಿಸಿರುವಂತೆ ತಾರೀಖು 28ನೇ ಜೂನ್ 1983ರಿಂದ ತಾರೀಖು 5ನೇ ಜುಲೈ 1983ರವರೆಗೆ ಯಾವುದೇ ಕೆಲಸದ ದಿನಗಳಲ್ಲಿ ಪ್ರಾಥಃಕಾಲ 11–00 ಗಂಟೆಯಿಂದ ಮಧ್ಯಾಹ್ನ 3–00 ಗಂಟೆಯವರೆಗೆ ಪಡೆಯಬಹುದು.

4. ಉಮೇದುವಾರಿಕೆ ನಾಮ ನಿರ್ದೇಶನ ಪತ್ರಗಳನ್ನು ಉಮೇದುವಾರರು ಅಥವಾ ಸೂಚಕರು ತಾರೀಖು 28ನೇ ಜೂನ 1983ರಿಂದ ತಾರೀಖು 5ನೇ ಜುಲೈ 1983ರವರೆಗೆ ಯಾವುದೇ ಕೆಲಸದ ದಿನದ ಪ್ರಾಥಃಕಾಲ 11–00ರಿಂದ ಮಧ್ಯಾಹ್ನ 3–00 ಗಂಟೆಯೊಳಗಾಗಿ ಚುನಾವಣೆ ನಿರ್ವಚನಾಧಿಕಾರಿಯವರಿಗೆ ಅಥವಾ ಅವರ ಕಛೇರಿಯಲ್ಲಿ ಫಾರಂ 7ರಲ್ಲಿ ನಿರ್ದಿಷ್ಟಿಸಿರುವ ಮೇರೆ ಸಲ್ಲಿಸಬಹುದಾಗಿರುತ್ತದೆ.

5. ಉಮೇದುವಾರಿಕೆ ನಾಮ ನಿರ್ದೇಶನ ಪತ್ರಗಳನ್ನು ಚುನಾವಣಾ ನಿರ್ವಚನಾಧಿಕಾರಿ (ಬೆಳಕವಾಡಿ ಪುರಸಭಾ) ಕಛೇರಿಯಲ್ಲಿ ತಾರೀಖು 7ನೇ ಜುಲೈ 1983ನೇ ಗುರುವಾರ ಪ್ರಾಥಃಕಾಲ ಹನ್ನೊಂದು ಗಂಟೆಗೆ ಸರಿಯಾಗಿ ಪರಿಶೀಲನೆಗೆ ತೆಗೆದುಕೊಳ್ಳಲಾಗುತ್ತದೆ.

6. ಉಮೇದುವಾರಿಕೆಯನ್ನು ವಾಪಸ್ ಪಡೆಯುವ ಬಗ್ಗೆ ನೋಟೀಸನ್ನು ಉಮೇದುವಾರರಿಂದ ಅವರ ಸೂಚಕರಿಂದ ಅವರ ಚುನಾವಣಾ ಪ್ರತಿನಿಧಿಯಿಂದ ಫಾರಂ ನಂ. 7ರಲ್ಲಿ ನಿರ್ದಿಷ್ಟಿಸಿರುವ ಮೇರೆ ಚುನಾವಣಾ ನಿರ್ವಚನಾಧಿಕಾರಿಯವರ ಕಛೇರಿಯಲ್ಲಿ ತಾರೀಖು : 11-7-1983ನೇ ಸೋಮವಾರ ಮಧ್ಯಾಹ್ನ 3 (ಮೂರು) ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು.

7. ಉಮೇದುವಾರಿಕೆ ನಾಮನಿರ್ದೇಶನ ಪತ್ರವನ್ನು ಮತ್ತು ಉಮೇದುವಾರಿಕೆಯನ್ನು ವಾಪಸ್ ಪಡೆಯುವ ಬಗ್ಗೆ ಕೊಡತಕ್ಕ ಸೂಚನಾ ಪತ್ರಗಳನ್ನು ಚುನಾವಣಾ ನಿರ್ವಚನಾಧಿಕಾರಿಯವರಿಗೆ ಅಥವಾ ಸಹಾಯಕ ಚುನಾವಣಾ ನಿರ್ವಚನಾಧಿಕಾರಿಯವರಿಗೆ ಸಲ್ಲಿಸಬಹುದು.

8. ಚುನಾವಣೆ ಸ್ಪರ್ಧೆ ಉಂಟಾದಲ್ಲಿ ಮತದಾನವು ತಾರೀಖು : 31ನೇ ಜುಲೈ 1983ನೇ ಭಾನುವಾರ ಬೆಳಿಗ್ಗೆ 8-00 ಗಂಟೆಯಿಂದ ಸಾಯಂಕಾಲ 4-00 ಗಂಟೆಯವರೆಗೆ ಅವಿಚ್ಛಿನ್ನವಾಗಿ ನಡೆಯುವುದು.

9. ಚುನಾವಣೆಯು 5ನೇ ಅಗಸ್ಟ್ 83ರೊಳಗೆ ಪೂರ್ತಿಗೊಳ್ಳುವುದು.

(ವಿ. ಮುನಿವೆಂಕಟಪ್ಪ)

ಬೆಳಕವಾಡಿ
ತಾ : 28-6-1983.

ಕ್ಷೇತ್ರಾಭಿವೃದ್ಧಿ ಅಧಿಕಾರಿ ಮತ್ತು ಬೆಳಕವಾಡಿ
ಪುರಸಭಾ ಸದಸ್ಯರ ಚುನಾವಣಾ ನಿರ್ವಚನಾಧಿಕಾರಿ.

ಸೃಷ್ಟಿಯಲ್ಲಿ ಅಸಮತೆ ಇದೆಯೆ ?

ಸಾಮಾನ್ಯವಾಗಿ ನಮಗೆ ಗಕ್ಕನೆ ಕಣ್ಣಿಗೆ ಕಾಣುವಂತಹುದು ನಮ್ಮೆಲ್ಲರಲ್ಲೂ ಸಮನಾದ ಬುದ್ಧಿವಂತಿಕೆ, ಶಕ್ತಿ ಸಾಮರ್ಥ್ಯಗಳಿಲ್ಲದಿರುವುದು. ಇದರಿಂದ ನಾವು ನೇರವಾಗಿ ಪ್ರಕೃತಿಯೇ ಅಸಮತೆಯನ್ನು ನಿರ್ಮಿಸಿದೆ ಎಂದು ಅವಸರದ ಸಿದ್ಧಾಂತ ಮಾಡಿಬಿಡುತ್ತೇವೆ. ಆದರೆ ವಸ್ತುಸ್ಥಿತಿ ಹಾಗಿದೆಯೇ ?

ಡಾ. ಪೋಲಂಕಿ ರಾಮಮೂರ್ತಿ

ವಿಚಾರ

ಮೈಸೂರಿನ ದಲಿತ ಯುವಕರು ಏರ್ಪಡಿಸಿದ್ದ ದಲಿತ ಕಲಾಮೇಳದ ಏಪ್ರಿಲ್ 15, 1983ರ ಅಂಬೇಡ್ಕರ್ ವಿಚಾರ ಸಂಕಿರಣದಂದು ತತ್ವಶಾಸ್ತ್ರದ ಪ್ರಾಧ್ಯಾಪಕರಾದ ಡಾ. ಎ. ಎಲ್. ಶಿವರುದ್ರಪ್ಪನವರು ಒಂದು ಚಿಂತನಾತ್ಮಕ ಪ್ರಶ್ನೆಯನ್ನು ಎತ್ತಿದರು. ಅವರು, ಬ್ರಾಹ್ಮಣರಲ್ಲಿ ಬಸವ, ಕ್ಷತ್ರಿಯರಲ್ಲಿ ಬುದ್ಧ, ವೈಶ್ಯರಲ್ಲಿ ಗಾಂಧಿ ಮತ್ತೆ ಶೂದ್ರರಲ್ಲಿ ಅತಿ ಶೂದ್ರ, 'ಪಂಚಮ'ರಲ್ಲಿ ಅಂಬೇಡ್ಕರ್ ಹೇಗೆ ಜಾತಿಯ ವಿರುದ್ಧ ಸಮಾನತೆಯ ಬಗ್ಗೆ ಕ್ರಾಂತಿ ಮಾಡಿದರೆಂದು ಪ್ರಸ್ತಾಪಿಸುತ್ತಾ, ಗಾಂಧಿ ಮಾತ್ರ ಹರಿಜನೋದ್ಧಾರಿಯಾದಾಗ್ಯೂ ಜಾತಿ ವ್ಯವಸ್ಥೆಯಲ್ಲಿ ಗಾಢವಾಗಿ ನಂಬಿದ್ದ ಸನಾತನಿ ಎಂದು ವಿವರಿಸಿದರು. ಕೊನೆಯಲ್ಲಿ ಅವರು "ಅಸಮತೆ ಪ್ರಕೃತಿಯಲ್ಲೇ ಇರುವ ಸಹಜಗುಣ" ಎಂಬ ತಾತ್ವಿಕ ನಿಲುವನ್ನು ತೆಗೆದುಕೊಂಡು, ಆದರೆ ಮಾನವರಾದ ನಾವು ಮಾನವೀಯವಾದ ಸಮತೆಯನ್ನು ಬೆಳೆಸಿಕೊಳ್ಳಬೇಕೆಂದರು. ಡಾ. ಶಿವರುದ್ರಪ್ಪನವರ ನಿಲುವನ್ನು ಪುಷ್ಟೀಕರಿಸುತ್ತಾ ಲೇಖಕ ಹಾಗೂ ಇಂಗ್ಲಿಷ್ ಪ್ರಾಧ್ಯಾಪಕರಾದ ಡಾ. ಯು. ಆರ್. ಅನಂತಮೂರ್ತಿ ಸೃಷ್ಟಿಯಲ್ಲಿ ಅಸಮತೆ ಇದ್ದಾಗ್ಯೂ ನಾವು ಮಾತ್ರ ಸಮತೆಯ ಮಾನವರಾಗಬೇಕೆಂದು ಅನುಮೋದಿಸಿದರು. ಅಂದಿನ ಅಧ್ಯಕ್ಷತೆಯಲ್ಲಿದ್ದ ನಾನು ಈ ಇಬ್ಬರು ಉಪನ್ಯಾಸಕರ ತಾತ್ವಿಕ ನಿಲುವನ್ನು ಪ್ರಶ್ನಿಸುತ್ತಾ ಮುಂದಿಟ್ಟ ಕೆಲವು ಅಂಶಗಳ ವಿವರವನ್ನು ಇಲ್ಲಿ ಕೊಡುತ್ತಿದ್ದೇನೆ:

ಗಾಂಧಿ ಕೂಡ ಅಸಮತೆ ದೈವದತ್ತ, ಪ್ರಕೃತಿ ನಿರ್ಮಿತವೆಂದು ನಂಬಿದ್ದರು. ಜಾತಿವ್ಯವಸ್ಥೆ, ಚಾತುರ್ವರ್ಣ, ಅತ್ಯಂತ ವೈಜ್ಞಾನಿಕವೆಂದು ಅವರು ವಿವರಣೆಯಲ್ಲಿ ಸಾರಿದ್ದಾರೆ :

"Varnashrama is, in my opinion, inherent in human nature, and Hinduism has simply reduced it to a science. It does't attach to birth. A man cannot change Varna by choice. Not to abide by one's Varna is to disregard the Law of Heredity. (Young India, October 6, 1921) "ವರ್ಣಾಶ್ರಮ, ನನ್ನ ಅಭಿಪ್ರಾಯದಲ್ಲಿ, ಮಾನವ ಪ್ರಕೃತಿಯಲ್ಲೇ ಅಡಗಿದೆ. ಅದನ್ನು ಹಿಂದೂ ಧರ್ಮ ಮಾತ್ರ ವೈಜ್ಞಾನಿಕಗೊಳಿಸಿದೆ, ಅಷ್ಟೆ. ಅದು ಹುಟ್ಟಿನಿಂದಲೇ ಬಂದದ್ದು. ಯಾವನೂ ತನ್ನ ವರ್ಣವನ್ನು ಆಯ್ದುಕೊಳ್ಳಲಾರ. ಬದಲಿಸಲಾರ. ವರ್ಣಧರ್ಮವನ್ನು ಪರಿಪಾಲಿಸದವನನ್ನು ವಂಶಪಾರಂಪರ್ಯತೆಯ ನಿಯತಿಯನ್ನು ಅಲ್ಲಗಳೆಯುತ್ತಾನೆ").

ನಿಜವಾದ ವೈಜ್ಞಾನಿಕ ಬಾಯಿ ಬಡಿಯುವಂತೆ, ವೈಜ್ಞಾನಿಕ ಪಾರಿಭಾಷೆಯಲ್ಲೇ ಗಾಂಧಿ ತನ್ನ ಸನಾತನವನ್ನು, ಯಾವ ಮತಾಂಧನೂ, ಅಂಧಶ್ರದ್ಧೆಯ ಶರಣನೂ ವಿವಾರಿಸಲಾಗದ ಖಡಾಖಂಡಿತತೆಯಲ್ಲಿ ಜಾಹೀರುಪಡಿಸಿದ್ದಾರೆ. ಆದರೆ ಗಾಂಧಿಯ ವೈಜ್ಞಾನಿಕತೆ ಎಂತಹುದೆಂದರೆ ಬಿಹಾರದಲ್ಲಿ ಭೂಕಂಪವಾಗಿ ಸಾವಿರಾರು ಜನ ಸತ್ತಾಗ ಅದು ಅಲ್ಲಿನ ಜನ ಅಸ್ಪೃಶ್ಯರ ಮೇಲೆ ಮಾಡಿದ ಪಾಪಕ್ಕಾಗಿ ದೇವರು ಕೊಟ್ಟ ಶಿಕ್ಷೆ ಎಂದು ಸಾರುವಂತಹುದು ; ಎಲ್ಲಾ ಖಾಯಿಲೆಗಳಿಗೆ ರಾಮನಾಮವೇ ರಾಮಬಾಣವೆಂದು ಪ್ರಚಾರ ಮಾಡುತ್ತಾ, ತನಗೆ ಅಪೆಂಡಿಸೈಟಿಸ್ ಆದಾಗ ಆಸ್ಪತ್ರೆ ಸೇರಿ ಆಪರೇಷನ್ ಮಾಡಿಸಿಕೊಳ್ಳುವಂತಾದ್ದು ; ರೈಲುಗಾಡಿಗಳಿರುವುದರಿಂದ ದೇಶದಲ್ಲಿ ಕ್ಷಾಮ ಹೆಚ್ಚುತ್ತದೆ, ಅಲ್ಲದೆ ಎಲ್ಲರೂ ಸುಲಭವಾಗಿ ತೀರ್ಥ ಕ್ಷೇತ್ರಗಳಿಗೆ ಹೋಗಬಹುದಾದ್ದರಿಂದ ಧಾರ್ಮಿಕತೆ ಕುಗ್ಗುತ್ತದೆ ಎಂದು ರೈಲುಗಾಡಿಗಳನ್ನು ವಿರೋಧಿಸುವಂತಾದ್ದು. ಆದ್ದರಿಂದ ನಾವು ಗಾಂಧಿಯ ವೈಜ್ಞಾನಿಕತೆಯ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಗಿಲ್ಲ.

ಇನ್ನು ಸೃಷ್ಟಿಯಲ್ಲಿ ಅಸಮತೆ ಇದೆ ಎಂಬ ನಿಲುವಿನ ಬಗ್ಗೆ ನಾವು ಸ್ವತಂತ್ರವಾಗಿ ಯೋಚನೆ ಮಾಡಬೇಕಾಗಿದೆ. ಸಾಮಾನ್ಯವಾಗಿ ನಮಗೆ ಗಕ್ಕನೆ ಕಣ್ಣಿಗೆ ಕಾಣುವಂತಹುದು ನಮ್ಮೆಲ್ಲರಲ್ಲೂ ಸಮನಾದ ಬುದ್ಧಿವಂತಿಕೆ, ಶಕ್ತಿ ಸಾಮರ್ಥ್ಯಗಳಿಲ್ಲದಿರುವುದು. ಇದರಿಂದ ನಾವು ನೇರವಾಗಿ ಪ್ರಕೃತಿಯೇ ಅಸಮತೆಯನ್ನು ನಿರ್ಮಿಸಿದೆ ಎಂದು ಅವಸರದ ಸಿದ್ಧಾಂತ ಮಾಡಿಬಿಡುತ್ತೇವೆ. ಆದರೆ ವಸ್ತುಸ್ಥಿತಿ ಹಾಗಿದೆಯೆ ?

ಪ್ರಕೃತಿಯಾದ ನೆಲ, ಗಾಳಿ, ಮಳೆ, ಬೆಳಕು– ಇವೆಲ್ಲವೂ ಯಾವುದೇ ವಿಧವಾದ ಪಕ್ಷಪಾತವಿಲ್ಲದೆ ಒಲವುವಿರೋಧಗಳಿಲ್ಲದೆ, ಬೆಳೆಯನ್ನೂ ಹಾಗೆಯೇ ಕಳೆಯನ್ನೂ ಏಕಕಾಲದಲ್ಲಿ ಬೆಳೆಸುತ್ತವೆ. ನಮ್ಮ ಅಳತೆಗೋಲಿನಂತೆ ನಮಗೆ ಬೆಳೆ ಆಹಾರ, ಕಳೆ ವಿಷ. ಪ್ರಕೃತಿಗಾದರೋ ಅವೆರಡೂ ಒಂದೇ ; ಸಮಜೀವಿಗಳು, ಸೃಷ್ಟಿಯ ಔದಾರ್ಯದಲ್ಲಿ ಸಮಭಾಗಿಗಳು. ನಾವು ಗೊಬ್ಬರ ಕೊಟ್ಟು ನೀರೆರೆವ ಕೈತೋಟದಲ್ಲಿ ಗುಲಾಬಿಯೂ ಗೋರಂಟಿಸೊಪ್ಪು ಒಂದೇ ಕಸುವಿನಿಂದ ಬೆಳೆಯುವುದು ನಮಗೆ ತಲೆನೋವು. ನಮ್ಮ ಮಾನವಿಕ ಮೌಲ್ಯಗಳಲ್ಲಿ ನಾವು ಗುಲಾಬಿಯ ಚೆಲುವು, ಗಂಧಗಳನ್ನು ಮೆಚ್ಚುತ್ತೇವೆ, ರಸಿಕತೆಯಿಂದ ಕೊಂಡಾಡುತ್ತೇವೆ. ಆದರೆ ಗೋರಂಟಿ ಸೊಪ್ಪು ಒಳ್ಳೆಯ ಆಹಾರವಾದಾಗ್ಯೂ, ಉತ್ತಮ ಔಷಧವಾದಾಗ್ಯೂ ಅದು ಗುಲಾಬಿ ಎದುರು ಕಳೆ, ಕಸ. ಅದಕ್ಕೆ ಮುಂದೋಟದಲ್ಲಿ ಸ್ಥಾನವಿಲ್ಲ. ಹಿತ್ತಲಲ್ಲಿ ತರಕಾರಿ ತೋಟದಲ್ಲಿ ಅದಕ್ಕೆ ಜಾಗ ಸಿಗಬಹುದು. ಆದರೆ, ಪ್ರಕೃತಿಗೆ ಹುಲ್ಲು ಹೂಗಳ ತಾರತಮ್ಯವಿಲ್ಲ.

ಒಮ್ಮೆ ನಾನು ಕುಕ್ಕರಹಳ್ಳಿಯ ಕೆರೆಯ ದಂಡೆಯಲ್ಲಿ ತಿರುಗಾಡುತ್ತಿದ್ದಾಗ ನನ್ನ ಗೆಳೆಯರಾದ ಫುಡ್ ರಿಸರ್ಚ್‌ವಿಜ್ಞಾನಿ ಡಾ. ದಾನಿಯವರೊಡನೆ "ನೋಡಿ, ಈ ಸೊಳ್ಳೆಗಳು ಇಲ್ಲಿ ಇಷ್ಟು ಹುಲುಸಾಗಿ ವೃದ್ಧಿಯಾಗುತ್ತಿವೆಯಲ್ಲಾ ಯಾತಕ್ಕೆ, ಯಾವ ಉದ್ದೇಶಕ್ಕೆ ಈ ಸಂತಾನ ಬೆಳೆಯುತ್ತಿದೆ" ಎಂದಾಗ, ಅವರು ಅಂತಹುದೇ ಪ್ರಶ್ನೆಗೆ ವಿಜ್ಞಾನಿಯೊಬ್ಬರು ಕೊಟ್ಟ ಉತ್ತರವನ್ನು ನನಗೆ ಹೇಳಿದರು : 'Tell me what is the purpose of man, and I shall tell you what is the purpose of the mosquito ("ಸರಿ, ನೀವು ನನಗೆ ಮಾನವ ಜೀವಿಯ ಉದ್ದೇಶವೇನು ಹೇಳಿ, ನಾನು ನಿಮಗೆ ಈ ಸೊಳ್ಳೆಯ ಉದ್ದೇಶವೇನೆಂದು ಹೇಳುತ್ತೇನೆ") ಆ ಉತ್ತರ ನಮ್ಮಿಬ್ಬರನ್ನೂ ಸ್ವಲ್ಪ ಹೊತ್ತು ಮೌನಗೊಳಿಸಿಬಿಟ್ಟಿತ್ತು.

ನಮಗೆ ನಮ್ಮವೇ ಆದ ಮಾನದಂಡ ಗಳಿವೆ, ಪುರುಷಾರ್ಥಗಳಿವೆ, ಪ್ರಯೋಜನಗಳಿವೆ. ಅವೆಲ್ಲವೂ ನಮ್ಮ ಮೂಗಿನ ನೇರದ ಹಿತಾಸಕ್ತಿಗಳು, ಮೌಲ್ಯಗಳು, ತತ್ವಗಳು, ಧ್ಯೇಯಗಳು. ಆದರೆ ನಾವು ಕೂಪಮಂಡೂಕ ಮಾನವತೆಯನ್ನು ಮೀರಿ ಇಡೀ ಜೀವನ, ಜೀವ–ಜೀವಿಗಳ ವಿರಾಟ್ಟಿನಲ್ಲಿ ನಿಂತು ನೋಡಿದಾಗ ಹೂ–ಹುಲ್ಲುಗಳ ಸೊಲ್ಲಿ–ಮಾನವರ ಪ್ರಯೋಜನಗಳು, ಜೀವಾರ್ಥಗಳು ತಿಳಿಯಬಹುದಾಗಿದೆ. ಜೀವ ವಿಕಾಸದ ವಿಶ್ವದಲ್ಲಿ ಜೀವ–ಜೀವಿಗಳ ವೈಶಿಷ್ಟ್ಯ, ವೈವಿಧ್ಯತೆಗಳನ್ನು ಕಾಣಬಹುದಾಗಿದೆ.

ಇನ್ನು ನಾವು ನಮ್ಮ ಮಾನವಜೀವನವನ್ನೇ ತೆಗೆದುಕೊಳ್ಳುವ. ಉದಾಹರಣೆಗೆ ಒಂದೇ ತಾಯಿಯ ಮಕ್ಕಳಾದ ಪಾಂಡವರಲ್ಲಿ ಭೀಮನಿಗೆ ಬಾಹುಬಲವಿದ್ದರೆ ಅರ್ಜುನನಿಗೆ ಬಿಲ್ವಿದ್ಯೆ, ನಕುಲ ಸಹದೇವರಿಗೆ ಅಶ್ವಾರೋಹ, ಧರ್ಮರಾಯನಿಗೆ ಧರ್ಮವಿವೇಕ. ಹೀಗೆ ಪಂಚಪಾಂಡವರೆಲ್ಲ ವಿಭಿನ್ನರು, ವಿಶಿಷ್ಟರು. ಬಿಲ್ವಿದ್ಯೆಯ ಅರ್ಜುನ ಬಾಹುಬಲಿ ಭೀಮನಿಗಿಂತ ಮೇಲೆ, ಕೀಳೆ? ನಕುಲ ಸಹದೇವರ ಅಶ್ವಾರೋಹದ ಕುಶಲತೆಗೂ ಧರ್ಮರಾಯನ ಧರ್ಮರಾಯನ ಧರ್ಮಜ್ಞತೆಗೂ ಹೋಲಿಕೆ ತಾರತಮ್ಯ ಸರಿಯೇ, ಸಾಧುವೇ? ಅರ್ಜುನ ಬಾಣದಿಂದ ಇದಿರಾಳನ್ನು ಪರಾಭವಿಸಿದರೆ ಧರ್ಮರಾಯ ಸೊಲ್ಲಿನಿಂದ ("ಅಶ್ವತ್ಥಾಮಹತ: ಕುಂಜರ") ವೈರಿಯನ್ನು ನಿಷ್ಕ್ರಿಯ ಗೊಳಿಸುತ್ತಾನೆ. ಇವರಿಬ್ಬರಲ್ಲಿ ಯಾರು ಹೆಚ್ಚು, ಯಾರು ಕಡಿಮೆ?

ಪಂಚಪಾಂಡವರೆಲ್ಲರೂ ವಿವಿಧ ಪ್ರತಿಭಾವಿಭಿನ್ನರು. ಆದ್ದರಿಂದ ಅವರೆಲ್ಲರೂ ಸಮರು. ಯುದ್ಧವೆಂಬ ಸಾವು–ಬಾಳುಗಳ ಸಂದಿಗ್ಧ ಸಂದರ್ಭದಲ್ಲಿ ಐವರೂ ಐದು ವಿಧಗಳಲ್ಲಿ ಕಾದು ಗೆದ್ದ ಯೋಧರು, ವಿಜೇತರು. ಸಾವನ್ನು ಗೆದ್ದ ಜೀವಸಮರು. ಅವರಲ್ಲಿ ಆ ವಿಭಿನ್ನತೆ ಇಲ್ಲದಿದ್ದರೆ ಅವರಲ್ಲಿ ಯಾರೂ ಉಳಿಯುತ್ತಿರಲಿಲ್ಲವೇನೋ!

ರಾಮಾಯಣದ ರಾಮಲಕ್ಷ್ಮಣರೂ ಯಮಳರಂತಿದ್ದರೂ ಅವರಿಬ್ಬರೂ ಭಿನ್ನಕುಶಲಿಗಳು, ಪರಾಕ್ರಮಿಗಳು, ಪ್ರತಿಭಾನ್ವಿತರು. ವಾಲ್ಮೀಕಿ ಲಕ್ಷ್ಮಣನನ್ನು "ಮಹಾಬಾಹು" ಎಂತಲೇ ಹೆಚ್ಚಾಗಿ ಸಂಬೋಧಿಸುತ್ತಾನೆ. ಆದ್ದರಿಂದ ರಾಮಾಯಣದಲ್ಲಿ ಅನೇಕ ಭುಜಬಲದ ಕೆಲಸಗಳಲ್ಲಿ ಲಕ್ಷ್ಮಣನೇ ಮುಂದು. ರಾಮನ ಬಿಲ್ಲಿನ ಪ್ರಾವೀಣ್ಯತೆ ಅವನನ್ನು ಬಿಲ್ಲು ಮುರಿಯುವ ರಾವಣನನ್ನು ಕೊಲ್ಲುವ ಪರಾಕ್ರಮಿಯನ್ನಾಗಿ ಮಾಡುತ್ತದೆ. ಹೀಗೆ ವಾಲಿಸುಗ್ರೀವರಲ್ಲಿಭಿನ್ನತೆಯಿದೆ, ವಾಯುಪುತ್ರರಾದ, ಭೀಮಾಂಜನೇಯರಲ್ಲೂ ವಿಶಿಷ್ಟತೆ ಇದೆ.

ನಮ್ಮಲ್ಲಿ ಒಂದು ನಾಣ್ಣುಡಿ ಇದೆ: "ಐದೂ ಬೆರಳು ಒಂದೇ ಸಮನಿಲ್ಲ" ಎಂಬುದು. ಹೌದು, ಐದೂ ಬೆರಳೂ ಒಂದೇ ಸಮನಿಲ್ಲದ್ದರಿಂದಲೇ ಐದೂ ಬೆರಳಿನಿಂದ ಹಿಡಿಕೆ ಸಾಧ್ಯ, ಮುಷ್ಟಿಗೆ ಬಲ; ಅವು ಸಮನಿರದಿರುವುದರಿಂದಲೇ ಹೆಬ್ಬೆರಳಿನ ಕೆಲಸ ಕಿರುಬೆರಳಿಂದಾಗದು. ಬಾಣ ಬಿಡಲು ಹೆಬ್ಬೆರಳು ಅತ್ಯಾವಶ್ಯಕವಾದದ್ದರಿಂದ ಹೆಬ್ಬೆರಳು ಕೊಟ್ಟ ಏಕಲವ್ಯನ ಬಿಲ್ಲು ಮೂಲೆಗೆ ಬೀಳುತ್ತದೆ. ಹಾಗೆಯೇ ಕೈಕೇಯಿಯ ಕಿರುಬೆರಳು ರಥದ ಕೀಲಿನ ಕೆಲಸವನ್ನು ಮಾಡದಿದ್ದಿದ್ದರೆ ದಶರಥ ಬಹುಶ: ಉಳಿಯುತ್ತಿರಲಿಲ್ಲ; ರಾಮಾಯಣವಾಗುತ್ತಿರಲಿಲ್ಲ. ಹೆಬ್ಬೆರಳೇ ಏಕಲವ್ಯ; ಕಿರುಬೆರಳೇ ಕೈಕೇಯಿ. ಅವೆರಡು ಬೆರಳುಗಳಲ್ಲಿ ಯಾವುದು ಬಲ, ಯಾವುದು ಎಡ?

ನಾವು ಐದೂ ಬೆರಳು ಸಮನಿಲ್ಲ ಎನ್ನುವಾಗ ನಾವು ಬರೀಬೆರಳಿನ ಉದ್ದವನ್ನು ಲೆಕ್ಕ ಹಾಕುವ ಉದ್ದ ಲೆಕ್ಕಿಗರು, ಅಲ್ಪಮೌಲಿಗಳು, ಮಾಪನಮಾನವರು. ಆದ್ದರಿಂದ ನಾವು ಐದೂ ಬೆರಳು ಸಮನಿಲ್ಲ ಅನ್ನುವುದಕ್ಕಿಂತ ಐದೂ ಬೆರಳು ಐತರ ಎನ್ನುವುದು ಹೆಚ್ಚು ಸೂಕ್ತ.

ಹೀಗೆ ನಾವೆಲ್ಲರೂ ನಾನಾತರ. ಒಟ್ಟಾಗಿ ನಾವು ಮಾನವರು, ಜನಾಂಗ; ಒಂಟಿಯಾಗಿ ನಾವು ವ್ಯಕ್ತಿಗಳು, individuals: ನಮ್ಮಲ್ಲಿ ನಮ್ಮತನ, ಅಭಿವ್ಯಕ್ತಿ, ವ್ಯಕ್ತವಾಗಿರಲಿ ಅವ್ಯಕ್ತವಾಗಿರಲಿ ನಾವು ಮೂಲತ: ವ್ಯಕ್ತಿಗಳು, ವ್ಯಷ್ಟಿಗಳು; ವಿಭಿನ್ನತಾ ವಿಶೇಷರು; ವೈವಿಧ್ಯರು.

ಆದರೆ ನಮ್ಮ ಸಾಮಾಜಿಕ ಮೌಲ್ಯಗಳು ಮಾನದಂಡಗಳು ಲೌಕಿಕವಾದುವುಗಳು, ವ್ಯಾವಹಾರಿಕ ಹಾಗೂ ವ್ಯಾಪಾರೀಗುಣ ವಿಶೇಷದವುಗಳು. ನಮ್ಮ ಮಕ್ಕಳನ್ನು ನಾವು ನಮ್ಮ ಲೌಕಿಕ-ವ್ಯಾವಹಾರಿಕ ಮಾನದಂಡಗಳಿಂದಲೇ ನಾವು ಅಳೆಯುತ್ತೇವೆ. ಮಕ್ಕಳು ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕೆಂಬ ಮಾನದಂಡದಿಂದಲೇ ನಾವು ಅವರನ್ನು ವಿಂಗಡಿಸುತ್ತೇವೆ.

ಹಿಂದೆ ವಿದ್ಯಾರ್ಥಿಗಳ ತಲೆಗಳನ್ನು ವರ್ಷಾಂತ್ಯದಲ್ಲಿ ದಾರದಿಂದ ಅಳೆದು ನೋಡಿ ಅವರ ಬುದ್ಧಿ ಬೆಳವಣಿಗೆಯನ್ನು ತಿಳಿಯುತ್ತಿದ್ದರಂತೆ. ಅದು ಹಾಸ್ಯಾಸ್ಪದ ದಂತಕಥೆ ಎಂದು ನಾವು ಈಗ ನಗಬೇಕಾಗಿಲ್ಲವೇಕೆಂದರೆ ಈಗಂತೂ ನಾವು ಹೆಚ್ಚಿನ ಪ್ರಮಾಣದಲ್ಲಿ ನಮ್ಮ ಮಕ್ಕಳನ್ನು ಅವರ "ತಲೆ" ಗಳಿಂದಲೇ ಅಳೆಯುತ್ತೇವೆ. ಅದಕ್ಕೆ ನಾವು ದಾರ ಉಪಯೋಗಿಸದಿರಬಹುದು ಕಂಪ್ಯೂಟರ್ (Computer) ಆ ಕೆಲಸ ಮಾಡುತ್ತಿರಬುದು. ನಮ್ಮ ಮಕ್ಕಳಿಗೆ ಅಲ್ಜೀಬ್ರಾ ಬಾರದಿದ್ದರೆ ಅವರು ಮೂರ್ಖರು, ನಿಷ್ಪ್ರಯೋಜಕರು. ಅವರು ನಮ್ಮ ದೃಷ್ಟಿಯಲ್ಲಿ ಮನುಷ್ಯರೇ ಅಲ್ಲ. ಅವರನ್ನು ನಾವು ಕತ್ತೆ, ಕುರಿ, ದನ ಎಂತಲೇ ಮೂದಲಿಸುತ್ತೇವೆ.

ನಮ್ಮ ಮಗು ಅಲ್ಜೀಬ್ರಾದಲ್ಲಿ ಕಡಿಮೆ ಅಂಕಗಳಿಸಿರಬಹುದು. ಚರಿತ್ರೆಯಲ್ಲಿ, ಸಾಹಿತ್ಯದಲ್ಲಿ ಹೆಚ್ಚು ಅಂಕ ಪಡೆದಿರಬಹುದು. ಆದರೆ ಅವನು ಎಂಜಿನಿಯರು, ಡಾಕ್ಟರು ಆಗಲಾರದವನಾದ್ದರಿಂದ ಅವನು ನಮ್ಮ ಗಣಿಕೆಯಲ್ಲಿ ದಡ್ಡ.

ನಮ್ಮ ಮಾನದಂಡ—ಅಲ್ಜೀಬ್ರಾ. ನಮ್ಮ ಮಕ್ಕಳು ಅಲ್ಜೀಬ್ರಾವಿಂಗಡಿತರು. ಅಲ್ಜೀಬ್ರಾ ಮಕ್ಕಳಿಗೆ ಮನೆಯಲ್ಲಿ ತಾಯಂದಿರು ಬೆಣ್ಣೆ ಇಕ್ಕುತ್ತಾರೆ. ಈ ಅಲ್ಜೀಬ್ರಾ ಪಕ್ಷಪಾತದಿಂದಲೇ ಜಗತ್ತಿನ ಪಿತರಾದ ಪಾರ್ವತೀಪರಮೇಶ್ವರರೂ ಬುದ್ಧಿವೇಗದ ಅಲ್ಜೀಬ್ರಾ ಮಗು ಗಣೇಶನನ್ನು ಬಹುಮಾನಿಸುತ್ತಾರೆ, ತೊಡೆಯ ಮೇಲೆ ಕೂರಿಸಿಕೊಳ್ಳುತ್ತಾರೆ; ವಾಯುವೇಗದದ ಡ್ಡಮಗು ಷಣ್ಮುಖನನ್ನು ಉಪೇಕ್ಷಿಸುತ್ತಾರೆ; ಉಪೇಕ್ಷಿತ ಷಣ್ಮುಖ ಹೆಂಗಸರಿಂದ ದೂರವಾಗಿ, ಮದುವೆಯಿಲ್ಲದೆ ಒಂಟಿಯಾಗುತ್ತಾನೆ.

ಈ ಅಲ್ಜೀಬ್ರಾ ಮಾನದಂಡದಿಂದಲೇ ನಾವು ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಶೂದ್ರರು, ಅಂತ್ಯಜರು, ಹೊಲೆಮಾದಿಗರು. ಆದರೆ ಸೃಷ್ಟಿ, ಪ್ರಕೃತಿ, ಮಾತ್ರ ಅಲ್ಪಮಾನವನ ಸುಣ್ಣಬೆಣ್ಣೆಗಳ ತಾರತಮ್ಯ ಮಾಡದೆ ಎಲ್ಲರನ್ನೂ ಜೈವಿಕ ಔದಾರ್ಯದ ಸಮತೆಯಲ್ಲೇ ಬೆಳೆಸುತ್ತದೆ, ಮೆರೆಸುತ್ತದೆ.

ಮಾನವನು ತನ್ನ ಕ್ಷುದ್ರತೆಯಲ್ಲಿ ತನ್ನವರೇ ಆದ ಕೆಲವರನ್ನು ವಂಚಿಸಿ ಅತ್ಯಂತ ಅಮಾನುಷವಾದ ರೀತಿಯಲ್ಲಿ ಅವರನ್ನು ಅಸ್ಪೃಶ್ಯರೆಂದು ಹೊರಗಿಟ್ಟು ತೊತ್ತುಳ ತುಳಿದರೂ ಸೃಷ್ಟಿ, ತನ್ನ ಜೈವಿಕ ಔದಾರ್ಯದ ಸಮತೆಯಲ್ಲಿ ಆ ನಿಕೃಷ್ಟರನ್ನು ಅವರ ಆಂತರಿಕ ಅಭಿವ್ಯಕ್ತಿಯಲ್ಲಿ ಬೆಳಗಿಸಿ ಅವರನ್ನು ಈ ನಾಡಿನ ಜಾನಪದ ಪರಂಪರೆಯ ಕಲಾವಿದರನ್ನಾಗಿ

ಪಂಚಪಾಂಡವರೆಲ್ಲರೂ ವಿವಿಧ ಪ್ರತಿಭಾ ವಿಭಿನ್ನರು. ಆದ್ದರಿಂದ ಅವರೆಲ್ಲರೂ ಸಮರು. ಯುದ್ಧವೆಂಬ ಸಾವು ಬಾಳುಗಳ ಸಂಧಿಗ್ಧ ಸಂದರ್ಭದಲ್ಲಿ ಐವರೂ ಐದು ವಿಧಗಳಲ್ಲಿ ಕಾದು ಗೆದ್ದ ಯೋಧರು, ವಿಜೇತರು. ಸಾವನ್ನು ಗೆದ್ದ ಜೀವಸಮರು. ಅವರಲ್ಲಿ ಆ ವಿಭಿನ್ನತೆ ಇಲ್ಲದಿದ್ದರೆ ಅವರಲ್ಲಿ ಯಾರೂ ಉಳಿಯುತ್ತಿರಲಿಲ್ಲವೇನೋ!

ಗೆಳೆಯನಿಗೆ

ಗೆಳೆಯಾ !
ಕೋಳ ತೊಡಿಸಿಕೊಂಡ ಮಿತ್ರ
ನನ್ನಂತವರ ಎದೆಯಲ್ಲಿ
ಧಿಮಿಗುಡುವ ದಾವಾಗ್ನಿ
ಮೈ ತುಂಬ ಮನ ತುಂಬ
ಧಗ-ಧಗಿಸಿ ಉರಿಯುತ್ತ
ಕೋಟಿ-ಕೊತ್ತಳಗಳ
ಇತಿಹಾಸ ಕೆಡುವುತ್ತ
ಸಂಪ್ರದಾಯದ ಬೇರ ಸುಡಲು
ಸುತ್ತಲೂ ನಾಲಿಗೆ ಚಾಚಿದೆ
ರಕ್ತದೋಕಳಿಯಲ್ಲೆ ಶತಮಾನಗಳುರುಳಿವೆ
ವೇದಶಾಸ್ತ್ರವ ಹೇಳುತ್ತ
ಪುರಾಣ ಕತೆಗಳ ಬಿಚ್ಚುತ್ತ
ವಿಜೃಂಭಿಸಿದ ಈ ಜನ ;
ನಮ್ಮೆಲ್ಲ ಆಸೆಗಳ ಕೊಂದು
ನಮ್ಮ ಜನರ-ಜೀವಂತ-ಮನುಜರ
ಗೇಣ್ಹೊಟ್ಟೆಗಾಗಿ ಬದುಕನ್ನೇ ಒತ್ತೆ ಇಟ್ಟವರ
ರಕುತ ಕುಡಿದ ಈ ಜನ ;
ಕುರಿ-ಕೋಳಿ ಪ್ರಾಣಿಗಳ
ರಕುತ ಕುಡಿದ ನಮ್ಮನ್ನು
ಹೊರಗಿಟ್ಟಿನ್ನಾರೆ, ಮೆಟ್ಟಿ ತುಳಿದಿದ್ದಾರೆ
ಅದಕ್ಕೇ ಗೆಳೆಯಾ !
ಇಲ್ಲಿ ನ್ಯಾಯ ಸತ್ತಿದೆ
ಪ್ರಾಮಾಣಿಕ ಬದುಕು
ಆತ್ಮಹತ್ಯೆ ಮಾಡಿಕೊಂಡಿದೆ
ಕೊಳೆತು ನಾರುವ ಈ
ವ್ಯವಸ್ಥೆಯ ತಳವ ಹೊಲೆಯಲು
ಮತ್ತೆ ದಾರ-ಸೂಜಿಗಳು
ಬೇಡಾ ಮಿತ್ರ
ಬರಡು ಬಂಜರಿನಲಿ
ಹೊಸ ಸಸಿಪಲ್ಲವಿಸುವ
ಕನಸು ಕಾಣುವದು ಬೇಡ
ಸುಟ್ಟು ಹೋಗಲಿ ಒಮ್ಮೆ
ಈ ದೈತ್ಯರ ಅಟ್ಟಹಾಸ
ಆಗ ಚಿಗುರೀತು ಅರಳೀತು
ನವ ಬದುಕಿನ ಮುಂದಹಾಸ

—ಡಾ. ಬಸವರಾಜ ಸಬರದ

ಮೆರೆಸಿದೆ. ಈ ನಾಡಿನ ಜಾನಪದ ಕಲೆಯೇ ದಲಿತ ಕಲೆ.

ನಾನು ವಿಷಯವನ್ನು ಮಂಡಿಸುತ್ತಿರುವುದು "ದಲಿತ ಕಲಾಮೇಳ"ದ ಆಶ್ರಯದಲ್ಲಿ. ಇಲ್ಲಿ "ದಲಿತ ಕಲಾ" ಎಂಬ ಪದಗಳ ಸಂಯೋಜನೆ ಆಕಸ್ಮಿಕವಲ್ಲ ನೈಸರ್ಗಿಕ. ದಲಿತ ಮತ್ತು ಕಲೆ ಒಂದನ್ನೊಂದು ಅವಲಂಬಿಸಿವೆ. "ದಲಿತ" ಎಂದರೆ ಒಡೆದ, ಭಗ್ನ ಕ್ಷೋಬೆಗೊಂಡ, ಶೋಷಿತ ಎಂದರ್ಥ. ಎಲ್ಲಿ ನೋವು ದುಃಖಗಳಿವೆಯೋ ಅಲ್ಲಿ ಹೃದಯ ಜೀವಕ್ಕೆ ಹಾತೊರೆಯುತ್ತದೆ. ಉತ್ಕರ್ಷೆಗೆ ಸ್ಪಂದಿಸುತ್ತದೆ. ಆದ್ದರಿಂದಲೇ Our Sweetest songs are those that tell of saddest thought. ("ನಮ್ಮ ಕರುಳ ಕಿಚ್ಚಿನ ಪಾಡೇ ನಮ್ಮ ನೆಚ್ಚಿನ ಹಾಡು")

ಕಾಯಕಕ್ಕೂ ಕಲೆಗೂ ನಿಕಟ ಸಂಬಂಧವಿದೆ. ರಾಗಿ ಬೀಸುವ, ಬತ್ತ ಕುಟ್ಟುವ, ಕುಯ್ಯುವ, ಒಕ್ಕುವ ಕ್ರಿಯೆಗಳಲ್ಲಿ ದಲಿತ ಹೆಂಗಸರು ಹಾಡುತ್ತಾರೆ. ಶೋಷಣೆಯಲ್ಲಿ ಚರ್ಮ ಸುಲಿಸಿಕೊಂಡ ದಲಿತ ಚರ್ಮದ ತಮ್ಮಟೆ, ಡೊಳ್ಳು ದುಡಿಗಳಿಂದ ಹಾಡು ಹೊಮ್ಮಿಸುತ್ತಾನೆ, ಕರುಳತಂತಿಯನ್ನು ಮಿಡಿದು ರಾಗ ಹೊರಡಿಸುತ್ತಾನೆ. ಕುಣಿಯುತ್ತಾನೆ, ಕೇಕೆ ಹಾಕುತ್ತಾನೆ. ಅವನನ್ನು ಮೆಟ್ಟಿದ ದಣಿಗಳನ್ನು ತಣಿಸುತ್ತಾನೆ, ಮೈಮರೆಸುತ್ತಾನೆ. ಹುಲಿಯಾಗಿ ಕುಣಿದು ಅವರು ಎಸೆದ ರೂಪಾಯಿಯನ್ನು ಹಣೆಗೆ ಹಚ್ಚಿಕೊಳ್ಳುತ್ತಾನೆ. ಸೂಳೆಯಾಗಿ ಕುಣಿದು ಅವರ ರೂಪಾಯಿ ಹೊಡೆತಕೆ ಮಣಿಯುತ್ತಾನೆ. ನೋವನ್ನೇ ನಲಿವಾಗಿ ಹರಿಸುವ ಕಲೆಗಾರನಾಗುತ್ತಾನೆ.

ಹೀಗೆ ಸೃಷ್ಟಿ ಅಸ್ಪೃಶ್ಯನ ಜೈವಿಕ ಅಭಿವ್ಯಕ್ತಿಯನ್ನು, ವ್ಯಷ್ಟಿವಿಶೇಷವನ್ನು ಹೊರಚೆಲ್ಲಿ ಅವನನ್ನು ಸಾರ್ಥಕ ಜೀವಿಯನ್ನಾಗಿ ಮಾಡುತ್ತದೆ. ಬೇಡನಿಂದ ರಾಮಾಯಣವನ್ನು, ಬೆಸ್ತನಿಂದ ಮಹಾಭಾರತವನ್ನು, ಅಸ್ಪೃಶ್ಯ ತಿರುಕ್ಕುರುಳಿನಿಂದ ಕಾವ್ಯವನ್ನೂ ಆಳ್ವಾರರಿಂದ ಹಾಡನ್ನೂ ಅಸಂಖ್ಯಾತ ಅಜ್ಞಾತ, ಅನಾಮಧೇಯ ಕಲೆಗಾರರಿಂದ ಜಾನಪದದ ಮಹಾಸಾಗರವನ್ನೇ ಹೊರಹೊಮ್ಮಿಸಿ ಆ ನಾಡಿನ ಜನರ ಜೀವನವನ್ನು ಸಾಫಲ್ಯಗೊಳಿಸುತ್ತದೆ.

ನೃತ್ಯದ ಕಲೆಯನ್ನು ಬೀರಿ ಮನಸೆಳೆದ ಹೆಂಗಸರು ಸೃಷ್ಟಿಯ ದೃಷ್ಟಿಯಲ್ಲಿ ವ್ಯಕ್ತಿವಿಶೇಷದ ಕಲಾವಿದರು. ಆದರೆ ಮಾನವನಾದ ಹರಿಶ್ಚಂದ್ರನ ಎಣಿಕೆಯಲ್ಲಿ ಹೊಲತಿಯರು. ಹರಿಶ್ಚಂದ್ರನ ಮಾನವ ಮಾನದಂಡ ಜಾತಿಸ್ವಾರ್ಥದ ಅಲ್ಪದ್ದು. ಸೃಷ್ಟಿ ಪರಿಗಣನೆ ಸೃಷ್ಟಿ ವಿಶೇಷಕ್ಕೆ ಬಾಗುವ ಔದಾರ್ಯದ ಅನಂತದ್ದು. ಅಸಮತೆ ನಮ್ಮಲ್ಲಿದೆ. ಅದು ಮಾನವ ಕಲ್ಪಿತ. ಸಮತೆ ಸೃಷ್ಟಿಯ ಗುಣ. ಅದರ ಸಹಜ ಪ್ರವೃತ್ತಿ.

ನಮ್ಮಲ್ಲಿ "ಲೋಕೋಭಿನ್ನರುಚಿಃ", "ಭಿನ್ನ ರುಚಿರ್ಹಿ ವಿಶ್ವಾ" ಎನ್ನುವ ಮಾತುಗಳಿವೆ. ಅವು ಸೃಷ್ಟಿಯ ವಿಭಿನ್ನತಾವಿಶೇಷವನ್ನೂ, ಆ ವಿಭಿನ್ನತೆ ಅನಂತತೆಯನ್ನೂ ಸಾರಿ ಹೇಳುತ್ತವೆ. ಇಂಗ್ಲೀಷಿನಲ್ಲಿ ಎರಡು ಬಟಾಣಿಗಳೂ ಒಂದೇ ಸಮನಿಲ್ಲ ಎನ್ನುವ ಮಾತೂ ಈ ಸೃಷ್ಟಿವಿಶೇಷದ ವಿಭಿನ್ನತೆಯನ್ನೇ ಸಾರುತ್ತವೆ. ಈ ವಿಭಿನ್ನತಾ ವಿಶೇಷದಿಂದಲೇ ಸರ್ವಜೀವ ಜಂತುಗಳೂ ಒಂದೇ. ಅವೆಲ್ಲವೂ ಸಮ. "ಮಾನವಕುಲ ಒಂದೆ ವಲಂ" ಎನ್ನುವ ಮಾತು ತತ್ವವಲ್ಲ, ಧ್ಯೇಯವಲ್ಲ. ಸೃಷ್ಟಿ ಸತ್ಯ. ಜೀವಸತ್ಯ. ಸೃಷ್ಟಿಯಲ್ಲಿ ಭರತ ಬಾಹುಬಲಿಗಳು ಸಮ, ಒಂದು. ಅವರಲ್ಲಿನ ವ್ಯಕ್ತಿವಿಶೇಷದ ಅಭಿವ್ಯಕ್ತಿಯೇ ಅವರನ್ನು ಸಮನಾಗಿಸುತ್ತದೆ, ಒಂದಾಗಿಸುತ್ತದೆ. ಆದರೆ ನಾವು ನಮ್ಮ ಮಾನವ ದಂಡಗಳಿಂದ ಒಬ್ಬನನ್ನು ಮೆಚ್ಚುತ್ತೇವೆ, ಇನ್ನೊಬ್ಬನನ್ನು ಹಳಿಯುತ್ತೇವೆ.

ನಾವು ಭರತರಿರಬಹುದು, ಜಡಭರತರಿರಬಹುದು. ಆದರೆ ನಾವು ಎಲ್ಲಿಯವರೆಗೆ ಭರತನ ಅಥವಾ ಜಡಭರತನ ವ್ಯಕ್ತಿವಿಶೇಷವನ್ನು ಅಭಿವ್ಯಕ್ತಿಗೊಳಿಸಿಲ್ಲವೋ ಅಲ್ಲಿಯವರೆಗೆ ನಾವು ಎಚ್ಚರದ ಜೀವಿಗಳಲ್ಲ, ಸೃಷ್ಟಿ ವಿಭಿನ್ನರಲ್ಲ, ಜಡಮಾನವರು, Mass men.

ವಿಭಿನ್ನತೆಯೇ, ವೈವಿಧ್ಯತೆಯೇ, ವೈಶಿಷ್ಟ್ಯವೇ ಸೃಷ್ಟಿಯ ಗುರಿ. ಈ ವಿಭಿನ್ನತಾ ವಿಶೇಷದಿಂದಲೇ ಸೃಷ್ಟಿಯ ಜೀವಜಂತುಗಳು ಜೀವದ ಔದಾರ್ಯದಲ್ಲಿ ಸಮವಾಗಿ ಒಂದಾಗಿ ಬಾಳುತ್ತವೆ. ತೋಳ, ಕುರಿಮರಿ ನೀರು ಕುಡಿಯುತ್ತವೆ. ಇಲ್ಲಿ ಹೂವ ತರುವರ ಮನೆಗೆ ಹುಲ್ಲು ತರುವುದೂ ಒಂದೇ ; ಗರುವವಿಲ್ಲದ ಸಮತೆ.

ಸೃಷ್ಟಿಯಲ್ಲಿ, ನಿಸರ್ಗದಲ್ಲಿ, ಅಸಮತೆ ಕಾಣುವುದು ವೈದಿಕ, ಸನಾತನ ; ಗಾಂಧಿವಾದ, ಸತ್ಯವಲ್ಲ. ಭಿನ್ನತೆ ಅಸಮತೆಯಲ್ಲ ; ವಿಶಿಷ್ಟತೆ ತುಲನಾತ್ಮಕವಲ್ಲಿ. ಭಿನ್ನತೆಯನ್ನು ಅಳೆಯುವ ನಮ್ಮ ಅಳತೆಗೋಲು ಪುರುಷಾರ್ಥದ್ದು, ಪುರುಷಪ್ರಯೋಜನದ್ದು, ಸೃಷ್ಟ್ಯಾರ್ಥದ್ದಲ್ಲ, ಪ್ರಕೃತಿ ಪ್ರಯೋಜನದ್ದಲ್ಲ. ವಿಭಿನ್ನತೆಯೇ, ವಿಶಿಷ್ಟತೆಯೇ, ಏಕಮೇವಾದ್ವಿತೀಯತೆಯೇ ಜೀವ, ಜೀವನ.

ಸಮತೆಯೇ ಸೃಷ್ಟಿಯ ಮಾಧ್ಯಮ. ನಾನತ್ವವೇ ಸೃಷ್ಟಿಯ ನಿಯಮ. ಸರ್ವಾರ್ಥವೇ ಸೃಷ್ಟಿಯ ಮೌಲ್ಯ—ಸಾಫಲ್ಯ.

"ಜನಹಿತ ಸಾಧನೆಯಲ್ಲಿ ಅರ್ಥಪೂರ್ಣ ಕಾರ್ಯಗಳ ಆರು ತಿಂಗಳು"

ಕಳೆದ ನೂರೆಂಭತ್ತು ದಿನಗಳಲ್ಲಿ ಸರ್ಕಾರ ಇಟ್ಟ ಹೆಜ್ಜೆ ದಿಟ್ಟ; ತಳೆದ ನಿಲುವು ಅಚಲ. ಕೈಗೊಂಡ ಕಾರ್ಯವನ್ನು ಆಗುಮಾಡುವ ವಿಶ್ವಾಸ.

- ಯೋಜನಾ ವೆಚ್ಚದಲ್ಲಿ ಈ ವರ್ಷ ನೂರು ಕೋಟಿ ರೂ. ಹೆಚ್ಚಳ.
- ಅಭಾವ ಪರಿಹಾರ ಕಾರ್ಯಗಳಿಗೆ ಈವರೆಗೆ 50 ಕೋಟಿ ರೂ. ವೆಚ್ಚ.
- ರೈತರು ಹಾಗೂ ಗ್ರಾಹಕರಿಗೆ ನೀಡಿರುವ ರಿಯಾಯಿತಿ—ಸುಮಾರು 50 ಕೋಟಿ ರೂ.

ಕುಡಿಯಲು ನೀರು : ಕೃಷಿಗೆ ನೀರಾವರಿ : ಕುಡಿಯುವ ನೀರಿನ ತೀವ್ರ ಅಭಾವವಿರುವ ಗ್ರಾಮಾಂತರ ಪ್ರದೇಶದಲ್ಲಿ 25 ಕೋಟಿ ರೂ. ವೆಚ್ಚದಲ್ಲಿ 12,800 ಕೊಳವೆ ಬಾವಿಗಳ ಸೌಕರ್ಯ. ಪಟ್ಟಣ ಪ್ರದೇಶದಲ್ಲಿ 1.19 ಕೋಟಿ ರೂ. ವೆಚ್ಚದಲ್ಲಿ 550 ಕೊಳವೆ ಬಾವಿಗಳ ಸೌಲಭ್ಯ. ಎಲ್ಲ ಹಳ್ಳಿಗೂ ನೀರು ಪೂರೈಕೆಗಾಗಿ 100 ಕೋಟಿ ರೂ. ಯೋಜನೆ.

ಹಳೆ ನೀರಾವರಿ ಯೋಜನೆಗಳಿಗೆ ವಿಶೇಷ ಗಮನ. ದೊಡ್ಡ ಮತ್ತು ಮಧ್ಯಮ ನೀರಾವರಿಗೆ 89 ಕೋಟಿ ರೂ. ಕಾವೇರಿ ನದಿ ಕಣಿವೆ ಯೋಜನೆಗೆ 84 ಕೋಟಿ ರೂ. 80,000 ಎಕರೆಗೆ ಅಧಿಕ ನೀರಾವರಿ. 15 ಕೋಟಿ ರೂ. ವೆಚ್ಚದಲ್ಲಿ 400 ಹೊಸ ಕೆರೆಗಳ ನಿರ್ಮಾಣ.

ರೈತರಿಗೆ ರಿಯಾಯಿತಿ : ರೈತರಿಗೆ ಸುಮಾರು 36 ಕೋಟಿ ರೂಪಾಯಿಗಳಷ್ಟು ವಿವಿಧ ರೀತಿಯ ಪರಿಹಾರಗಳು.

ಅಭಾವ ಪರಿಹಾರ ಕಾರ್ಯ : ತೀವ್ರ ಅಭಾವಪೀಡಿತ ಪ್ರದೇಶಗಳ ಸಮಸ್ಯೆ ಪರಿಹಾರಕ್ಕೆ ಆದ್ಯತೆ. 50 ಕೋಟಿ ರೂ. ವೆಚ್ಚ. ಕೃಷಿ ಕಾರ್ಮಿಕರು, ರಸ್ತೆ ಮುಂತಾದ ಕಾಮಗಾರಿ ಕೆಲಸಗಾರರ ಕೂಲಿ ದರದಲ್ಲಿ ರೂ. 5 ರಿಂದ 6–50ಕ್ಕೆ ಹೆಚ್ಚಳ. ಅಭಾವ ಪರಿಹಾರ ಕಾರ್ಯ ಪರಿಶೀಲನೆಗೆ ಪ್ರತಿ ಜಿಲ್ಲೆಗೆ ಒಬ್ಬೊಬ್ಬ ಸಚಿವರ ನೇಮಕ.

ಕೈಗಾರಿಕೆ : ಶೀಘ್ರದಲ್ಲೇ ಹೊಸ ಕೈಗಾರಿಕಾ ನೀತಿಯ ಪ್ರಕಟಣೆ. ಗ್ರಾಮೀಣ ಕೈಗಾರಿಕೆಗಳಿಗೆ ಆದ್ಯತೆ. ತಿಂಗಳಿಗೆ ಒಂದು ಸಾವಿರದಂತೆ ಸಣ್ಣ ಕೈಗಾರಿಕಾ ಘಟಕಗಳ ಸ್ಥಾಪನೆಯ ಗುರಿ.

ಅಧಿಕಾರ ವಿಕೇಂದ್ರೀಕರಣ : ಪುರಸಭೆ, ನಗರಸಭೆಗಳ ಚುನಾವಣೆಗೆ ನಿರ್ಧಾರ; ಹದಿನೆಂಟು ವರ್ಷ ತುಂಬಿದವರಿಗೆಲ್ಲ ಮತಾಧಿಕಾರ. ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ.

ಲೋಕಾಯುಕ್ತ : ಸಾರ್ವಜನಿಕ ಶೀಲವೃದ್ಧಿ ಸಾಧ್ಯವಾಗುವ ಲೋಕಾಯುಕ್ತ ರಚನೆ ಒಂದು ಮಹತ್ವದ ಕ್ರಮ. ಭ್ರಷ್ಟಾಚಾರದ ಆಪಾದನೆಗೆ ಒಳಗಾದ ಅಧಿಕಾರಿ, ರಾಜಕಾರಣಿ ಈ ಸುಗ್ರೀವಾಜ್ಞೆಗೆ ಬದ್ಧ.

ಹಿಂದುಳಿದ ವರ್ಗಗಳ ಆಯೋಗ : ಹಿಂದುಳಿದ ವರ್ಗಗಳ ಹಿತರಕ್ಷಣೆಗೆ ನೇಮಕವಾದ ದ್ವಿತೀಯ ಹಿಂದುಳಿದ ವರ್ಗಗಳ ಆಯೋಗ ಹಾಗೂ ಅಲ್ಪಸಂಖ್ಯಾತರ ಸಮಸ್ಯೆ ಪರಿಶೀಲನೆಗೆ ರಚಿತವಾಗಿರುವ ಅಲ್ಪಸಂಖ್ಯಾತರ ಆಯೋಗಗಳ ಕಾರ್ಯಾರಂಭ. ಇದರಿಂದ ದುರ್ಬಲವರ್ಗದ ರಕ್ಷಣೆ. ಹರಿಜನ–ಗಿರಿಜನ ಅಭಿವೃದ್ಧಿ ಮಂಡಳಿಗೆ 12 ಕೋಟಿ ರೂ. ನೀಡಿಕೆ.

ಶಿಕ್ಷಣ : ಶಿಕ್ಷಣ ಕ್ಷೇತ್ರದ ಸಮಗ್ರ ಸುಧಾರಣೆಗೆ ಸಾಧ್ಯವಾಗುವ ಶಿಕ್ಷಣ ವಿಧೇಯಕಕ್ಕೆ ಸಿದ್ಧತೆ. ರಾಜ್ಯದ ವಿದ್ಯಾರ್ಥಿಗಳಿಗೆ ನಿಗದಿಪಡಿಸಿದ ಮೆಡಿಕಲ್ ಸೀಟುಗಳಿಗೆ ಸೀಟು ಶುಲ್ಕ ರದ್ದು. ಸರ್ಕಾರಿ ಸೇವೆಯಲ್ಲಿರುವ ಸ್ಥಳೀಯ ಹಾಗೂ ಸ್ಟೈಪೆಂಡರಿ ಪದವೀಧರರೂ ಹಾಗೂ ಇತರ ಅಭ್ಯರ್ಥಿಗಳಿಗೆ ಸರ್ಕಾರೀ ಸೇವೆಗೆ ಸೇರಲು ಗರಿಷ್ಠ ವಯೋಮಿತಿ ಏರಿಕೆ. ಡಿಗ್ರಿ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ಅತ್ಯುತ್ತಮ ಅಂಕ ಪಡೆದ ಹರಿಜನ–ಗಿರಿಜನ ವಿದ್ಯಾರ್ಥಿಗಳಿಗೆ ಸರ್ಕಾರಿ ಅಧಿಕಾರಿಗಳಾಗಿ ನೇರ ನೇಮಕದ ಅವಕಾಶ. ಹೊಸ ಇಂಗ್ಲಿಷ್ ಶಾಲೆಗಳ ಮಂಜೂರಾತಿ ರದ್ದು.

ಆಡಳಿತದಲ್ಲಿ ಕನ್ನಡ : ಆಡಳಿತದಲ್ಲಿ ಕನ್ನಡ ಬಳಕೆ ಕಡ್ಡಾಯ. ಕನ್ನಡ ಬಳಕೆ ಆಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ, ಸಮಸ್ಯೆಗಳಿದ್ದರೆ ಸಲಹೆ ಸೂಚಿಸಲು ಕಾವಲು ಸಮಿತಿ. ಅರಣ್ಯ ಅಭಿವೃದ್ಧಿ, ಮನೆಯಿಲ್ಲದವರಿಗೆ ಮನೆ, ನಿವೇಶನ, ಇಲಾಖಾ ಸಲಹಾ ಸಮಿತಿಗಳ ನೇಮಕ. ಹೀಗೆ ಜನಹಿತಕ್ಕಾಗಿ ಕೈಗೊಂಡಿರುವ ಕ್ರಮಗಳು ಹಲವಾರು. ಸಾಧನೆಗೆ ಕ್ರಮಬದ್ಧವಾಗಿ ಕಾರ್ಯನಿರತ. ಪ್ರಥಮ ವರ್ಷದ ಪ್ರಥಮಾರ್ಧದಲ್ಲಿ ಆಶಾದಾಯಕ ಮುನ್ನಡೆ.

ಮಹಾಜನತೆಗೆ ನೀಡಿರುವ ಆಶ್ವಾಸನೆಗಳನ್ನು ಈಡೇರಿಸಲು ಪಣತೊಟ್ಟಿದೆ—ಕರ್ನಾಟಕ ಸರ್ಕಾರ.

ಪ್ರಕಟಣೆ : ವಾರ್ತಾ ಮತ್ತು ಪ್ರಚಾರ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

ಸಾವನ್ನು ಗೆದ್ದ ಕ್ರಾಂತಿಕಾರಿಕವಿ ಚರಬಂಡರಾಜು ನೆನಪು

ಂಪ್ರದಾಯ, ಶೋಷಣೆ, ಜಾತೀಯತೆ ತುಂಬಿ
ಕುತ್ತಿರುವ ಆಂಧ್ರದ ಮಣ್ಣಿನ ಬಡಕುಟುಂಬ
ದರಲ್ಲಿ ಹುಟ್ಟಿದ ಚರಬಂಡರಾಜು, ಬದುಕಿನು
ಕ್ಕ ಹಸಿವು, ಸರ್ಕಾರಿ ವ್ಯವಸ್ಥೆಯ ಕಪಿಮು
ಸ ವಿರುದ್ಧ ಹೋರಾಡುತ್ತಾ, ತನ್ನ ಇಡೀ
ಕನ್ನು ಜೈಲಿನಲ್ಲಿ ಕಳೆದರು. ಏಕತಾನತೆಯಲ್ಲಿ
ಗಿದ್ದ ತೆಲುಗು ಸಾಹಿತ್ಯ ಲೋಕದಲ್ಲಿ–ಕ್ರಾಂತಿ
ಲೇಖಕರ ಸಂಘ ಸ್ಥಾಪಿಸಿ, ದೀನದಲಿತರ
ವುಗಳಿಗೆ ನುಡಿಕೊಟ್ಟು ಹಾಡಿ–ಪಟ್ಟಭದ್ರರ
ನಡುಗಿಸುವ ಸಿಂಹಸ್ವಪ್ನವಾಗಿದ್ದ ಚರಬಂಡ
ಂ 1982ರ ಜುಲೈ 2ರಂದು ಕ್ಯಾನ್ಸರಿಗೆ ಬಲಿ
ದರು.

ಅವರ ಸಾವು 'ಸಾವಲ್ಲ' ಅನ್ನುವುದಕ್ಕೆ ಸಾಕ್ಷಿ
ಗಿ 2-7-83 ರಂದು ಬೆಂಗಳೂರಲ್ಲಿ "ಚರಬಂ
ಜು ಸ್ಮರಣಾ ದಿನಾಚರಣೆ" ಏರ್ಪಟ್ಟಿತ್ತು.
ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಖ್ಯಾತ
ತ ಸಾಹಿತಿ ದೇವನೂರ ಮಹಾದೇವ ಅವರು
ಬಂಡರಾಜು ಅವರ "ಕಟಕಟೆ ಹತ್ತಲು ಬಿಡಿ"
ತೆ ಸಂಕಲನ ಬಿಡುಗಡೆ ಮಾಡುತ್ತಾ, "ಮನುಷ್ಯ
ಟ್ಟು ಸತ್ತಿರುತ್ತಾನೋ ಅಷ್ಟೇ ಉಳಿದುಕೊಂಡು
ದಿರುತ್ತಾನೆ...ಕವಿಯಾದವನು ಜನರ ಮನಸ್ಸಿ
, ಇಡೀ ಸಮಾಜದ ಮನಸ್ಸಿನಲ್ಲಿ ಉಳಿದುಕೊಂಡಿರುತ್ತಾನೆ, ಸಮಾಜದ ತಂದೆತಾಯಿಯಾಗಿರುತ್ತಾನೆ" ಎಂದರು. ಆಶಯಭಾಷಣ ಮಾಡಿದ ಕುಂ. ವೀರಭದ್ರಪ್ಪ–ಆಂಧ್ರಜನರ ಬದುಕು ಜಾತಿ ವಿಷದ ಬೆಂಕಿಯಲ್ಲಿ ಬೇಯುತ್ತಿರುವ ಬಗ್ಗೆ ತಿಳಿಸುತ್ತಾ "ಪ್ರಗತಿ ಪರಲೇಖಕರು ಇಂಥ ವ್ಯವಸ್ಥೆಯಲ್ಲಿ ಬದುಕಲು ಸಾಧ್ಯವಿಲ್ಲ" ಎಂದು "ಚರಬಂಡರಾಜು ಅವರ ಸಾವು ಸಾವಲ್ಲ, ವ್ಯವಸ್ಥೆ ಮಾಡಿದ ಕೊಲೆ" ಎಂದರು.

"ಹೆಂಡತಿಮಕ್ಕಳು, ಅಧಿಕಾರ, ಆಶೆ ಆಕಾಂಕ್ಷೆಗಳನ್ನು ತೊರೆದು, ಜನರಿಗೆ ತಾನು ನಂಬಿದ್ದ ಸಿದ್ಧಾಂತಗಳನ್ನು ತಲುಪಿಸುವಲ್ಲಿ ಚರಬಂಡರಾಜು ಯಶಸ್ವಿಯಾದರು–ಎಂದು 'ಕ್ರಾಂತಿಕಾರಿ ಲೇಖಕರ ಸಂಘ'ದ ಮುಖ್ಯಸ್ಥ ಸೀಯೆಸ್ಸಾರ್ ಪ್ರಸಾದ್ ತಿಳಿಸಿದರು.

ಆರ್ವಿಯಸ್ ಸುಂದರಂ ಮಾತನಾಡುತ್ತಾ–"ತನಗೆ ಕ್ಯಾನ್ಸರ್ ಇದ್ದುದು ಗೊತ್ತಾದಾಗಲೂ ಮೃತ್ಯುವನ್ನು ಗೇಲಿಮಾಡಿ ನಕ್ಕ ಚರಬಂಡರಾಜು, ತಾನು ಸತ್ತರೆ ಸಾವಿರ ಜನ ಹುಟ್ಟುತ್ತಾರೆ" ಎಂದದ್ದನ್ನು ಜ್ಞಾಪಿಸಿದರು. "ನಾವುಪುಸ್ತಕದೊಳಗಿಂದ ಮಾತಾಡುವುದಿಲ್ಲ, ಅನುಭವಗಳಿಂದ, ನಮ್ಮ ದಿಗಂಬರ ಕೊರಳಿಂದ ಮಾತಾಡುತ್ತೇವೆ" ಎಂದರು.

ಚರಬಂಡರಾಜುವಿನ ಇಡೀ ಸಾಂಸ್ಕೃತಿಕ ಬದುಕನ್ನು ವಿವರಿಸಿದ ಬೋಳಬಂಡಪ್ಪ ಅವರು "ಆಧ್ಯಾತ್ಮಿಕ ವಂಚನೆಗಳ ನಿಜರೂಪವನ್ನು ಬಯಲಿಗೆಳೆದ ಕವಿತೆಗಳಿಗೆ ಚರಬಂಡರಾಜು ಸಾಕ್ಷಿ" ಎಂದರು.

ಮಧ್ಯಾಹ್ನದ ಸಭೆಯಲ್ಲಿ ಮಾತನಾಡಿದ ಬಂಡಾಯ ಸಾಹಿತಿ ಸಿದ್ಧಲಿಂಗಯ್ಯ ಅವರು "ನಮ್ಮಲ್ಲಿರುವ ವರ್ಗ ಹೋರಾಟ, ಕ್ರಾಂತಿಯ ವಿಶ್ವರೂಪ, ಜನರನ್ನು ಮೂಢನಂಬಿಕೆಯಿಂದ ಬಚಾವು ಮಾಡಬೇಕೆಂದರು". ಆಶಯ ಭಾಷಣ ಮಾಡಿದ ಕವಿ ಶಿವಪ್ರಕಾಶ್, "ಕಮರ್ಶಿಯಲ್ ಕಲೆಯ ಹೊಡೆತದಿಂದ ಕನ್ನಡ ಕಾವ್ಯ ಮತ್ತು ಸೃಜನಾತ್ಮಕತೆ ತತ್ತರಿಸುತ್ತಿದೆ, ಕಾವ್ಯಚಿಂತನೆಯಲ್ಲಿ ಕ್ರಾಂತಿಕಾರಕ ಮನೋಭಾವನೆಯುಳ್ಳ ಅನೇಕ ಕನ್ನಡ ಕವಿಗಳು ಸಂಪ್ರದಾಯಕ್ಕೆ ಶರಣಾಗಿದ್ದಾರೆಂದು" ಹೇಳಿ ಚರಬಂಡರಾಜುರವರ ಆಲೋಚನೆಗಳು ನಮ್ಮದಾಗಬೇಕೆಂದರು.

ಚರಬಂಡರಾಜು ಅವರ ಕಾರ್ಯಸಾಧನೆಗಳು, ಸಾಂಸ್ಕೃತಿಕ ಚಳುವಳಿಗಳು, ಈ ಎಲ್ಲಕ್ಕೆ ಹಿಮ್ಮೇಳವಾಗಿದ್ದ ವಿಚಾರಗಳ ಬಗ್ಗೆ ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪ ಮತ್ತು ಆಂಧ್ರದ ರಮಣಾರೆಡ್ಡಿಯವರು ಮಾತನಾಡಿದರು.

ಕೋಲಾರದ 'ದಲಿತ ಕಲಾಮಂಡಳಿ', ಗುಂಟೂರಿನ 'ಜನ ನಾಟ್ಯ ಮಂಡಳಿ' ಹಾಗೂ ಮೈಸೂರಿನ 'ಜನಕಲಾ ರಂಗ'ದವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

—ಕೊಡಗಿನ ಗಣೇಶ್

ಹಳ್ಳಿಗಾಡ ನರಕದಲ್ಲಿ ಅಸ್ಪೃಶ್ಯ ಶಿಕ್ಷಕರು

ಹಳ್ಳಿಗಾಡಿನಲ್ಲಿರುವ ದಲಿತ ನೌಕರನ ಮೇಲೆ
ಲ್ಲೆ ನಡೆದಿದೆ ಎಂದು ತಿಳಿದು ತುಮಕೂರಿನಿಂದ
ಮೈಲಿ ದೂರದಲ್ಲಿರುವ ಪಾವಗಡಕ್ಕೆ 3 ಜನ
ಯರು ಹೊರಟೆವು. 90ಭಾಗ ಆಂಧ್ರದಿಂದ
ತ್ತುವರಿದ ಈ ತಾಲ್ಲೂಕಿಗೆ ಹೋಗಲು 10ಮೈಲಿ
ಧ್ರದೊಳಗೇ ಪ್ರಯಾಣ. ಬೇಸಿಗೆಯಲ್ಲಿ ಅತೀ
ಲಿರುವ ಈ ತಾಲ್ಲೂಕಿನಲ್ಲಿ ಶನಿದೇವರ
ವಸ್ಥಾನವಿದ್ದು ಪ್ರಸಿದ್ಧಿಯಾಗಿದೆ.

ನಾಗಲ ಮಡಿಕೆ ಹೋಬಳಿ ಶ್ರೀರಂಗಪುರ; ಅಲ್ಲಿ
ತಿಮ್ಮಯ್ಯನೆಂಬ ದಲಿತ ಪ್ರೈಮರಿ ಶಾಲೆಯ
ಬ್ಬರೇ ಉಪಾಧ್ಯಾಯರು. ಇಲ್ಲಿ ರೆಡ್ಡಿಗಳೇ
ಬಲಕೋಮು. ಊರಿನಲ್ಲಿ ಅವರದೇ ಹಿಡಿತ.
ತಿಬೇರುಗಳಿಂದ ಭದ್ರವಾಗಿರುವ ಈ ಊರಿನಲ್ಲಿ
ಸ್ಪೃಶ್ಯರಿಗೆ ಮನೆ ಸಿಕ್ಕುವುದೆಂದರೇನಾ. ಸರಿ
ಲೆಯಲ್ಲಿಯೇ ವಾಸ, ಅಲ್ಲೇ ಅಡಿಗೆ.

ಶ್ರೀರಂಗಪುರದ ಪಂಚಾಯ್ತಿ ಅಧ್ಯಕ್ಷ ಎಸ್.
ಮಲಿಂಗರೆಡ್ಡಿ ಎಂಟು ಎಕರೆ ಗದ್ದೆ ಮತ್ತು
ೋಟ ಹಾಗೂ ಎಪ್ಪತ್ತು ಎಕರೆಗೂ ಹೆಚ್ಚು ಕಡ್ಲೆಕಾಯಿ ಬೆಳೆಯುವಹೊಲ ಹೊಂದಿರುವ ಕುಳ.

ಈ ರಾಮಲಿಂಗರೆಡ್ಡಿ ದಲಿತ ಉಪಾಧ್ಯಾಯನ ಮೇಲೆ ಹಲ್ಲೆ ನಡೆಸಿದ್ದರೆಂದು ತಿಳಿದು ಸ್ಥಳಕ್ಕೆ ಹೋದೆವು. ಶಾಲೆಯ ಬಾಗಿಲಿಗೆ ಬೀಗ ಹಾಕಿತ್ತು. ಕೆಲವರು ಶಾಲೆಯ ಹಜಾರದಲ್ಲಿ ಕೂತು ಹರಟೆ ಹೊಡೀತಿದ್ರು.—ಆ ಮೇಲೆ ತಿಳಿಯಿತು, ಅವರೆಲ್ಲ ರೆಡ್ಡಿ ಥೇಲಗಳೆಂದು. ಹಾಗೇ ಊರೊಳೀಕೆ ಹೋದೆವು. ಯಾರದೋ ಮನೆಹತ್ರ ಕಡ್ಲೇಕಾಯಿ ಸುಲೀತಿದ್ದ ಒಂದನೇ ತರಗತಿ ಪದ್ಮಕ್ಕನನ್ನು ಈ ವಿಷಯದ ಬಗ್ಗೆ ಕೇಳಿದೆವು. "ಮಾ ಅಯ್ಯವಾರ್ನಿ ಬಾಗಾ ಕೊಟ್ರಿ ಸಾ" (ನಮ್ಮ ಮೇಷ್ಟನ್ನು ಚೆನ್ನಾಗಿ ಹೊಡೆದ್ರು ಸಾ") ಅಂದಳು. ಹಾಗೇ ಬೀದಿಲಿ ಆಡ್ತಾ ಇದ್ದ 3ನೇ ತರಗತಿ ಆನಂದಪ್ಪನನ್ನು ಕೇಳಿದ್ದಕ್ಕೆ, ಸುತ್ತಾ ಮುತ್ತಾ ನೋಡ್ತಾ ಬಾಯಲ್ಲಿ ಅಂಗಿ ಕಚ್ಚಿಕೊಂಡು "ಚೆಪ್ಪೇ ತೀಸ್ಕೊನಿ ಕೊಟ್ಟೆ ಸಾ ಅಯ್ಯವಾರ್ನಿ" (ಮಟ್ಟೇ ತಗಂಡು ಹೊಡೆದ ಸಾ ಮೇಸ್ಟ್ರನ" ಅಂತ ಖಿನ್ನನಾಗಿ ತಲೆ ಬಗ್ಗಿಸಿ ಹೇಳಿದ. ಕಾರಣ ಕೇಳಿದಾಗ ಯಾಕೋ ಗೊತ್ತಿಲ್ಲ ಅಂದ್ರು. ಸಿಂಗಪ್ಪನನ್ನು ಮೇಸ್ಟ್ರ ನಡವಳಿಕೆ ಬಗ್ಗೆ ಕೇಳಿದಾಗ "ಎವರ ಬಿಡ್ಡ ಐತೆ ಏಮಿ ಮಂಚಿ ನಾಡು" (ಯಾರ ಮಗ ಆದ್ರೇನು ಒಳ್ಳೆಯವನು) ಅಂತಲೂ ಶಾಲೆ ಕ್ರಮವಾಗಿ ನಡೆಸುವ ಬಗ್ಗೆ ಮಲ್ಲಪ್ಪನಿಂದ 'ದಾಂಟ್ಲ ತಪ್ಪೇಮಿ ಲೇದು, ಬಾಗ ಚೇಸ್ತುಂಡೆ ಬಡಿನಿ' (ಅದರಲ್ಲಿ ತಪ್ಪೇನೂ ಇಲ್ಲ. ಚೆನ್ನಾಗಿ ಮಾಡ್ತಿದ್ದ ಸ್ಕೂಲನ್ನ) ಅನ್ನುವ ಪ್ರತಿಕ್ರಿಯೆಗಳು ಬಂದುವು.

ರಾಮಲಿಂಗರೆಡ್ಡಿ ಮಗ ಎಸ್.ಆರ್. ಶ್ರೀನಿವಾಸರೆಡ್ಡಿ ಈ ಸಾರಿ 4ನೇ ತರಗತಿಯಿಂದ ಪಾಸಾಗಿದ್ದ. 26-5-83ರಲ್ಲಿ ಮಗನ ಟಿ.ಸಿ. ಗಾಗಿ ಬಂದ ರಾಮಲಿಂಗರೆಡ್ಡಿ ಮಗನ ಹುಟ್ಟಿದ ತಾರೀಖನ್ನು ಒಂದು ವರ್ಷ ಮುಂದಕ್ಕೆ ಹಾಕಿಕೊಡಲು ಒತ್ತಾಯಿಸಿದ. ಹಾಗೆ ತಿದ್ದುವುದು ಅಪರಾಧವೆಂದೂ ಆ ಅಧಿಕಾರ ತನಗಿಲ್ಲವೆಂದೂ ಉಪಾಧ್ಯಾಯರು ತಿರಸ್ಕರಿಸಿದರು. ಕಾನೂನು ಬಾಹಿರ ಕೆಲಸ ಮಾಡಿ ಕೆಲಸ ಕಳೆದುಕೊಂಡರೆ ತನಗಾರು ಆಧಾರು ಎಂದೂ ಹೇಳಿದರು.

ಕೊನೇ ಪುಟಕ್ಕೆ

ನನ್ನ ನೋವಿನ ಸಂಪುಟದಿಂದ—೩

ತನ್ನನ್ನು ತಾನು ಕೊಂದುಕೊಳ್ಳುವಂಥ ಭಯಂಕರ ನಿರ್ಲಿಪ್ತತೆಯಲ್ಲಿ ನರಳುತ್ತಿರುವ ಬ್ರಾಹ್ಮಣ ಮನೆತನದಲ್ಲಿ ಹುಟ್ಟಿ ಬೆಳೆದ ಹಿಂದಿಯ ಪ್ರಖ್ಯಾತ ಬರಹಗಾರರಾದ ಭೀಷ್ಮಸಹಾನಿ ಅವರು ತಮ್ಮ ಚಿಂತನೆಗಳಿಗೆ ಮೊನಚು ಮೂಡಿಸಿದಂಥ ಅನುಭವಗಳ ಬಗ್ಗೆ ಇಲ್ಲಿ ಬರೆದಿದ್ದಾರೆ. ದಯಾಪವಾರ್ ಮತ್ತು ಮಧುಕರಸಿಂಹರ ನಂತರ ಭೀಷ್ಮ ಸಹಾನಿ ಅವರ ನೋವಿನ ಸಂಪುಟದಿಂದ.... ಪ್ರಕಟಿಸುತ್ತಿದ್ದೇವೆ. ತಿಪ್ಪೆಸ್ವಾಮಿ ಅನುವಾದಿಸಿದ್ದಾರೆ.

—ಸಂಪಾದಕ

ಬದುಕಿನಬಹಳಷ್ಟು ಸಮಯವನ್ನು ನಾನು ಚೇತನಾವಸ್ಥೆಯಲ್ಲಿ ಅಕ್ಕಪಕ್ಕದ ಪ್ರತಿಯೊಂದನ್ನೂ ಕಣ್ತೆರೆದು ಅರ್ಥ ಮಾಡಿಕೊಂಡು ಅಳೆದು ಸು ರಿ ದು ತೂಕ ಮಾಡಿ ತೀರ್ಮಾನಿಸಿದ್ದೇನೆ ಎಂದು ನನಗನ್ನಿಸುತ್ತಿಲ್ಲ. ಬದಲು ಬದುಕಿನ ಈ ಬಹಳಷ್ಟು ಸಮಯವನ್ನು ಅರ್ಧ ಚೇತನಾವಸ್ಥೆಯಲ್ಲಿ ಕಳೆದಿದ್ದೇನೇನೋ ಎಂದೆನ್ನಿಸುತ್ತಿದೆ. ಇನ್ನು ಬದುಕು ಸಾಗಿ ಬಂದ ದಾರಿಯತ್ತ ಹಿಂತಿರುಗಿ ನೋಡಿದರೆ–ಅದು ತಂಗಿಯ ಸಾವಾಗಿರಬಹುದು ಅಥವಾ ಹಿಂದೂ ಮುಸ್ಲಿಂ ದಂಗೆಯಾಗಿರಬಹುದು ಅಥವಾ ಇನ್ನಾವುದೇ ಪ್ರಕರಣವಾಗಿರಬಹುದು-ಪ್ರತಿ ಸಾರಿಯ ನೋವಿನ ಪ್ರಕರಣದಲ್ಲೂ ಮನಸ್ಸು ಜಡವಾಗಿ ಬಿಟ್ಟಂಥ ಅನುಭವವಾಗಿದೆ. ಹೀಗಾಗಿ ನನ್ನ ಬದುಕಿನಲ್ಲಿ ಒದಗಿದ ಎಲ್ಲ ನೋವು–ಕಹಿಯ ಅನುಭವ ಅದು ಘಟಿಸಿದ ಬಹಳ ಕಾಲದ ನಂತರ ಗಾಢವಾಗಿ ತಟ್ಟಿದೆ. ಅಂತೆಯೇ ಅವೆಲ್ಲದರ ಅರ್ಥ ಮತ್ತು ಮಹತ್ವವನ್ನು ತುಂಬಾ ಸಮಯದ ನಂತರವೇ ಅರ್ಥಮಾಡಿಕೊಂಡಿದ್ದೇನೆ. ನಾನು ಗಮನಿಸಿರುವ ಮತ್ತೊಂದು ಅಂಶವೆಂದರೆ ಬದುಕಿನಲ್ಲಿ ಎಷ್ಟೋ ಸಲ ಸಾಮಾನ್ಯವಾದ ಘಟನೆಗಳು ಮನಸ್ಸಿನಮೇಲೆ ಎಷ್ಟು ಪರಿಣಾಮ ಬೀರಿವೆಯೆಂದರೆ ಇವುಗಳಿಗೆ ಹೋಲಿಸಿದರೆ ಅನೇಕ ದೊಡ್ಡ ದೊಡ್ಡ ಕಷ್ಟ-ಕೋಟಲೆಗಳು ನನ್ನ ಮೈ-ಕೂದಲನ್ನು ಕೊಂಕಿಸುವಷ್ಟು ಸಹ ಪ್ರಭಾವ ಬೀರಿಲ್ಲ. ಬಹುಶಃ ಭೂತ ಕಾಲದ ನೆನಪುಗಳ ಗುಚ್ಛದಿಂದ ಯಾವುದಾದರೊಂದು ಸೂತ್ರವನ್ನು ಹಿಡಿದು ಅದರ ಮೂಲಕ ನನ್ನನ್ನು ನಾನೇ ಸ್ಪಷ್ಟ ಕಂಡುಕೊಳ್ಳುವುದು ತುಂಬ ಪ್ರಯಾಸದ ಕೆಲಸವೆಂದೂ ನನಗನ್ನಿಸುತ್ತದೆ.

ಈಗ ಬಾಲ್ಯವನ್ನು ನೆನಸಿಕೊಂಡರೆ ಅದು ಕತ್ತಲೆಯ ಗುಹೆಯಂತೆ ಭಾಸವಾಗುತ್ತದೆ. ಸಾಮಾನ್ಯವಾಗಿ ನಾನು ಖಾಯಿಲೆಯಿಂದಿರುತ್ತಿದ್ದು, ಬಾಲ್ಯದ ಸಹಜ ಹಕ್ಕಾದ ಆಟಪಾಟ-ಕುಣಿತಗಳಿಂದ ನಾನು ವಂಚಿತನಾಗಿದ್ದೆ. ಮಂಚದ ಮೇಲೆ ಮಲಗಿ ಸರಿಯುತ್ತಿದ್ದ ಬಿಸಿಲನ್ನು ನೋಡುತ್ತಿರುತ್ತಿದ್ದೆ, ಗಲ್ಲಿಗಳಲ್ಲಿ ಹಾಯ್ದು ಹೋಗುತ್ತಿದ್ದ ಫಕೀರರ, ಭಿಕ್ಷು



ಭೀಷ್ಮ ಸಾಹನಿ

ಕರ, ತಿಂಡಿ–ತಿನಿಸು ಮಾರುವವರ ಕೂಗುಗಳನ್ನು ಕೇಳಿಸಿಕೊಳ್ಳುತ್ತಿದ್ದೆ. ತಾಯಿಯ ತೊ ಡೆ ಯ ಮೇಲೆ ತಲೆ ಇಟ್ಟು ಮಲಗಿದಾಗ ತುಂಬಾ ಆರಾಮೆನಿಸುತ್ತಿತ್ತು. ತಾಯಿ ಹೇಳುತ್ತಿದ್ದ ಕವಿತ್ತ್, ಗೀತೆಗಳು, ಕತೆಗಳು–ಇವು ಸಾಮಾನ್ಯವಾಗಿ ಗಾಢವಾದ ನೋವಿನಿಂದ ತುಂಬಿರುತ್ತಿದ್ದವು–ನನ್ನ ರೋಗದ ಸಂಗಾತಿಗಳಾಗಿದ್ದವು. ಆರೋಗ್ಯವಂತ, ನಕ್ಕು-ನಲಿಯುತ್ತಿದ್ದ ಹುಡುಗರನ್ನು ನಾನು ಈರ್ಷ್ಯೆಯಿಂದ ನೋಡುತ್ತಿದ್ದೆ. ಬಹುಶಃ ಅಂದಿನಿಂದಲೇ ಇರಬೇಕು ನನ್ನಲ್ಲಿ ಕೀಳರಿಮೆ ಹಾಗೂ ನಾನು ಅಸಮರ್ಥ ಎಂಬ ಭಾವನೆ ಮೂಡತೊಡಗಿತ್ತು. ಉಳಿದವರೆಲ್ಲ ಆರೋಗ್ಯಶಾಲಿಗಳು ನಾನು ಮಾತ್ರ ರೋಗಿ ; ಉಳಿದವರ ಮುಖಗಳಲ್ಲಿ ನಲಿವು ನಾಟ್ಯವಾಡುತ್ತಿತ್ತು ; ನನ್ನ ಮುಖದಲ್ಲಿ ಮಾತ್ರ ಪ್ರೇತಕಳೆ ನೆಲೆಸಿತ್ತು ; ಉಳಿದವರೆಲ್ಲ ಬಗೆಬಗೆಯ ಆಟಪಾಟ ಚಟುವಟಿಕೆಗಳಲ್ಲಿ ಮಗ್ನರಾಗಿರುತ್ತಿದ್ದರು. ನಾನು ಮಾತ್ರ ಅವರನ್ನು ಬೆರಗುಗಣ್ಣುಗಳಿಂದ ನೋಡುತ್ತಿರುತ್ತಿದ್ದೆ. ಆತ್ಮ ವಿಶ್ವಾಸದಿಂದ ಪ್ರತಿ ಕೆಲಸವನ್ನು ಕೆಚ್ಚಿನಿಂದ ಮಾಡುತ್ತಿದ್ದ ದುಂಡ ದುಂಡಾದ ಆರೋಗ್ಯವಂತರ, ವ್ಯವಹಾರ ಕುಶ[illegible] ರಾದ ಜನ ನನಗೆ ವಜ್ರಗಳಂತೆ ಮೋಹಕರಾ[illegible] ಕಾಣುತ್ತಿದ್ದರು.

ಆದರೆ ನನ್ನ ಅಸಹಾಯಕತೆ ಸದಾ ನನ್ನ ಮ[illegible]ಸ್ಸನ್ನು ಕೊರೆಯುತ್ತಿತ್ತು. ಒಳಗೊಳಗೆ ನನ[illegible] ಧೈರ್ಯ ಕುಂದುತ್ತಿರುವಂತೆ ಭಾಸವಾಗುತ್ತಿತ್ತು. ಹೀಗಾಗಿ ಹಾಸಿಗೆಯಿಂದ ಎದ್ದ ಕೂಡಲೆ ಓಟ ಕೀಳ[illegible]ತ್ತಿದ್ದೆ. ಮನೆಯಿಂದ ಹೊರಡುತ್ತಿದ್ದಂತೆಯೇ ಯಾವುದಾದರೊಂದು ಟಾಂಗಾದಿಂದೆ ಓಡುತ್ತಿದ್ದೆ. ಓಡುತ್ತ-ಓಡುತ್ತ ನೆಗೆದು ಟಾಂಗಾ ಏರುತ್ತಿದ್ದೆ. ಟಾಂಗಾ ರಸ್ತೆಯ ಏರು-ತಗ್ಗುಗಳನ್ನು ದಾಟುತ್ತ ಒಂದು ದಾರಿಯಿಂದ ಇನ್ನೊಂದು ದಾರಿಗೆ, ಒಂದು ಪೇಟೆಯಿಂದ ಇನ್ನೊಂದು ಪೇಟೆಗೆ ಸಾ ಗು ತ್ತ ಹೋಗುತ್ತಿರುವಾಗ ನಾನು ಹುಚ್ಚನಂತೆ ನಾಲ್ಕೂ ಕಡೆಯ ದೃಶ್ಯಾವಳಿಗಳನ್ನು ನೋಡುತ್ತ-ನೋಡುತ್ತ ಎಲ್ಲಿಗೆ ತಲುಪುತ್ತಿದ್ದೆನೋ ನನಗೆ ಗೊತ್ತಾಗು[illegible]ತ್ತಿರಲಿಲ್ಲ. ಆ ದಿನ ಮನೆಗೆ ಹಿಂತಿರುಗಿ ಬಂದಾ[illegible] ಪುನಃ ಹಾಸಿಗೆಹಿಡಿಯುತ್ತಿದ್ದೆ, ಇಲ್ಲ, ಬೈಸಿಕೊಳ[illegible]ತ್ತಿದ್ದೆ. ಸರಿ,ನನ್ನ ತಿರುಗಾಟಕ್ಕೆ ಕತ್ತರಿ ಬೀಳುತಿತ್ತು.

ಇಷ್ಟಲ್ಲದೆ ಮನೆಯ ವಾತಾವರಣ ಒಂದು ವಿ[illegible]ಷ್ಟ ಬಗೆಯದಾಗಿತ್ತು. ಇಲ್ಲಿ ಬ್ರಹ್ಮಚಾರಿಯ[illegible] ಹಳದಿ ಬಣ್ಣದ ಪಂಚೆ, ಯಜ್ಞೋಪವೀತ, ಹವ[illegible] ಸಂಧ್ಯಾ ಹಾಗೂ ಉಪದೇಶಗಳು, ಆರ್ಯ ಸಮಾಜದ ಸಾಪ್ತಾಹಿಕ ಸತ್ಸಂಗವಿತ್ತು. ಇಲ್ಲಿ ಮಾಂ[illegible] ತಿನ್ನುವುದು ನಿಷಿದ್ಧವಾಗಿತ್ತು ಹಾಗೂ ಹೆಣ್ಣಿ[illegible] ಕಡೆ ನೋಡುವುದು ಸಹ ವರ್ಜ್ಯವಾಗಿತ್ತು, ಕಾದ[illegible] ಬರಿಗಳನ್ನು ಓದುವುದು, ಸಿನೆಮಾನೋಡುವುದನ್ನು ನಿಷೇಧಿಸಲಾಗಿತ್ತು.

ಸ್ಕೂಲಿನ ಓದು ಮುಗಿಸಿ ಹೊರಬರುತ್ತಿದ್ದಂತೆಯೇ ನಾನು ಭೇಟಿಯಾದ ವ್ಯಕ್ತಿಯಿಂದಾಗಿ ನನ[illegible] ವ್ಯಕ್ತಿತ್ವದಲ್ಲೇ ಅಪೂರ್ವ ಪರಿವರ್ತನೆಯಾಯಿತು. ಆ ವ್ಯಕ್ತಿ ಸಹ ದುಂಡು-ದುಂಡಾಗಿ, ಆರೋಗ್ಯವಂತರಾಗಿ, ಸೌಮ್ಯ-ಸುಂದರ ಪುರುಷರಾಗಿದ್ದರು. ನನ್ನ ಕಾಲೇಜು ಅಭ್ಯಾಸದ ಮೊದಲಕೆಲವುವರ್ಷಗಳಲ್ಲಿ ಅವರು ನನ್ನ ಇಂಗ್ಲಿಷ್ಅಧ್ಯಾಪಕರಾಗಿದ್ದರು.

KRNN 106 PANCHAMA Fortnightly 20, July 1983 Reg. No. 2561-76

ಉತ್ತರ ಪ್ರದೇಶದಲ್ಲೂ ವ್ಯಾಪಿಸಿರುವ 'ಸುಳ್ಳು ಹರಿಜನರು'

ಸುಳ್ಳು ಜಾತಿ ಪತ್ರ ಪಡೆದು ಹಲವಾರು ಸರರಿ ಹಾಗು ಅರೆಸರ್ಕಾರಿ ಹುದ್ದೆಗಳನ್ನು ಪಡೆದಿವುದು ಕೇವಲ ಕರ್ನಾಟಕದಲ್ಲಿಯ ವಿಷಯವಾಗಿಲ್ಲದಿಲ್ಲ. ದಲಿತರ ಹತ್ಯೆಗೆ ಕುಖ್ಯಾತವಾಗಿರುವ ತ್ತರ ಪ್ರದೇಶವು ಸುಳ್ಳು ಜಾತಿ ಪತ್ರಗಳನ್ನು ಡುವುದರಲ್ಲಿಯೂ ಸಹ ತನ್ನ ಕುಖ್ಯಾತಿಯನ್ನು ಳಿಸಿಕೊಂಡಿದೆ.

ಉತ್ತರ ಪ್ರದೇಶದ ಪೂರ್ವ ಭಾಗದ ಜಿಲ್ಲೆಗದ ಗೊಂಡಾ, ಬಸ್ತಿ, ಫೈಜಾಬಾದ್ ಜಿಲ್ಲೆಗಳಲ್ಲಿ ಸಾರಾರು ಜನ ಸುಳ್ಳು ಜಾತಿ ಪತ್ರಗಳನ್ನು ಪಡೆಕೊಂಡಿರುವುದು ಸತ್ಯಾಂಶವೆಂದು ಉತ್ತರ ಸದೀಯ ಪ್ರದೇಶದ ಕಾರ್ಯಕಲಾಪಗಳ ಸಚಿವ . ಅವ್ಮಾರ್ ರಿಜವಿ ಅವರು ವಿಧಾನಸಭೆಯಲ್ಲಿ ಟ್ಟಕೊಂಡಿದ್ದಾರೆ.

ಫೈಜಾಬಾದ್ ಜಿಲ್ಲೆಯಲ್ಲಂತೂ ಸುಳ್ಳು ಜಾತಿ ತ್ರಗಳನ್ನು ಪಡೆದುಕೊಂಡವರು ಸಹಾಯಕ ಜಿನಿಯರುಗಳಾಗಿದ್ದಾರೆ; ವೈದ್ಯರಾಗಿದ್ದಾರೆ; ಹಾಯಕ ಆದಾಯಕರ ಅಧಿಕಾರಿಗಳಾಗಿದ್ದಾರೆ. ದೇ ಜಿಲ್ಲೆಯ ಟಂಡಾ ತಾಲ್ಲೂಕಿನ ಲಾಲದೇವ ದವ ತಾನು ಗುವಾಲ ಎಂಬ ದಲಿತ ಜಾತಿಯ ನೆಂದು ಸುಳ್ಳು ಜಾತಿಪತ್ರ ಪಡೆದು ಬಸ್ತಿ ಲ್ಲೆಯ ಮೀಸಲು ಕ್ಷೇತ್ರದಿಂದ ಚುನಾವಣೆಗೂ ನಿಂತದ್ದು ಬೆಳಕಿಗೆ ಬಂದಿದ್ದರೂ ಸಹ ಲ್ಲಿಯವರೆಗೆ ಇವರ ಮೇಲೆ ಯಾವ ಕ್ರಮವನ್ನೂ ದುಕೊಂಡಿಲ್ಲ.

ಇಂಡಿಯನ್ ಆಯಿಲ್ ಕಂಪನಿಯವರು ತಮ್ಮ ರ್‌ಶಿಪ್‌ನ್ನು ನೀಡುವಾಗ ದಲಿತ ಜಾತಿಯ ಪ್ರಾಮುಖ್ಯತೆಯನ್ನು ನೀಡುವುದಾಗಿ ಪ್ರಕ. ಕೂಡಲೇ ಗೋಸಾಯಿಗಂಜ್‌ನ ಹಲವಾರು ಜನ ವೈಶ್ಯ ಜಾತಿಯವರು ಸುಳ್ಳು ಜಾತಿಪತ್ರ ಪಡೆದು ದಲಿತ ಜಾತಿಯವರಾಗಿ ಬಿಟ್ಟರು. ಇಂಡಿಯನ್ ಆಯಿಲ್ ಕಂಪನಿಯವರಿಗೆ ಈ ವಿಷಯವನ್ನು ಅನಂತರ ಮನಗಾಣಿಸಿ ಕೊಟ್ಟರೂ ಸಹ ಯಾವ ಕ್ರಮವನ್ನೂ ಸುಳ್ಳು ಜಾತಿ ಪತ್ರ ಪಡೆದುಕೊಂಡು ಡೀಲರ್‌ಶಿಪ್ ಪಡೆದವರ ಮೇಲೆ ಕೈಗೊಳ್ಳಲಿಲ್ಲ. ಬದಲಾಗಿ ಚೇತುದಾಸ್ ಎಂಬ ನಿಜವಾದ ದಲಿತನಿಗೆ ಡೀಲರ್‌ಶಿಪ್‌ನ್ನು ಯಾವುದೋ ಕ್ಷುಲ್ಲಕ ಕಾರಣ ನೀಡಿ ನಿರಾಕರಿಸಲಾಯಿತು. ಗೋಸಾಯಿಗಂಜಿನ ರಾಮಬಲಿ ಇಂಟರ್ ಕಾಲೇಜಿನಲ್ಲಿ ವೈಶ್ಯ ಜಾತಿಯ ವಿದ್ಯಾರ್ಥಿಗಳಾಗಿದ್ದವರು ವಿದ್ಯಾಭ್ಯಾಸದ ಕೊನೆಯ ವರ್ಷದಲ್ಲಿ ಅಂಗರಿಯಾ ಎಂಬ ದಲಿತ ಜಾತಿಯವರಾಗಿ ಪರಿವರ್ತಿತರಾಗಿ

ಏಕಲವ್ಯ

ರುವ ಪವಾಡ ನಡೆದಿದೆ. ವಾಸ್ತವವೆಂದರೆ ಅಂಗರಿಯಾ ಎಂಬ ದಲಿತ ಜಾತಿ ಉತ್ತರಪ್ರದೇಶದ ಈ ಭಾಗದಲ್ಲಿ ಇಲ್ಲವೇ ಇಲ್ಲ. ಕಾಲೇಜಿನ ಆಡಳಿತ ವರ್ಗ ಸುಳ್ಳು ಜಾತಿಪತ್ರ ನೀಡಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂಬುದು ಜನಜನಿತವಾದ ಸಂಗತಿಯಾಗಿದೆ.

ರಾಜ್ಯದ ಹರಿಜನ ಮತ್ತು ಸಮಾಜ ಕಲ್ಯಾಣ ಮಂತ್ರಿ ದೌಲತ್ ರಾಂ ಅವರು 29ನೇ ನವಂಬರ್ 82ರಂದು ಸುಳ್ಳು ಜಾತಿ ಪತ್ರ ನೀಡಿಕೆ ಬಗ್ಗೆ ತನಿಖೆ ನಡೆಸಲು ಫೈಜಾಬಾದ್ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರನ್ನು ನೇಮಿಸಿದರಷ್ಟೇ. ಇದುವರೆಗೆ ಒಂದು ಪ್ರಕರಣವನ್ನೂ ಪತ್ತೆ ಹಚ್ಚಲು ಈ ಮ್ಯಾಜಿಸ್ಟ್ರೇಟ್ ಯತ್ನಿಸಿಲ್ಲ. ಅವರಿಗೆ ನೀಡಲಾಗಿರುವ ದೊಡ್ಡ ಮೊತ್ತದ ಹಣವೇ ಈ ನಿಷ್ಕ್ರಿಯತೆಗೆ ಕಾರಣವೆಂದು ಜನರು ಚರ್ಚಿಸುತ್ತಿದ್ದಾರೆ.

ಸುಳ್ಳು ಜಾತಿಪತ್ರ ನೀಡಿಕೆಯಲ್ಲಿ ಕಾಂಗ್ರೆ ಪಕ್ಷದ ಏಜೆಂಟರೂ, ವಿರೋಧ ಪಕ್ಷಗಳ ಕೆಲ ಮುಖಂಡರೂ ಸೇರಿರುವರಲ್ಲದೇ ಫೈಜಾಬಾದ್ ಮತ್ತು ಬಸ್ತಿ ಜಿಲ್ಲೆಯ ಮೂವರು ದಲಿತ ಶಾಸಕರು ಸಹ ಶಾಮೀಲಾಗಿದ್ದಾರೆಂಬವದಂತಿ ಜಿಲ್ಲೆಯ ತುಂಬಾ ಹರಡಿದೆ. ಈ ವದಂತಿಯ ಬಗ್ಗೆ ಯಾವುದೇ ವಿವರಣೆಯನ್ನು ನೀಡಿರದ ದಲಿತ ಶಾಸಕರ ಮೌನವನ್ನು ವಹಿಸಿರುವುದು ವದಂತಿಯನ್ನು ಬಲಪಡಿಸಿದಂತಾಗಿದೆ.

ಈ ಮೂರು ಜಿಲ್ಲೆಗಳಲ್ಲಿ ಸುಳ್ಳು ಜಾತಿಪತ್ರಗಳ ವಿರುದ್ಧ ಉಗ್ರವಾಗಿ ಮಾಜಿ ಶಾಸಕ ರವೀಂದ್ರನಾಥ ತಿವಾರಿ ಅವರು ಸತತವಾದ ಚಳವಳಿಯನ್ನೇ ಆರಂಭಿಸಿದಾಗ ಅವರಿಗೆ ಬೆಂಬಲ ನೀಡಿದವರು, ವಿಧಾನ ಸಭೆಯಲ್ಲಿ ಕಾಂಗ್ರೆಯನ್ನು ಈ ಸಂಬಂಧದಲ್ಲಿ ಬಲವಾಗಿ ಟೀಕಿಸಿದವರು, ತಾವು ಮಾತ್ರ ದಲಿತರ ನಿಜವಾದ ಹಿತಚಿಂತಕರು ಎಂದು ಪೋಜು ನೀಡಿದವರು ಜನತಾ ಪಕ್ಷದವರು. ಈ ವಿಷಯದ ಸಂಬಂಧದಲ್ಲಿ ಫೈಜಾಬಾದಿನಲ್ಲಿ ರಾಸ್ತಾ ರೋಕೋ ಆಂದೋಲನವನ್ನೂ ನಡೆಸಿದವರು ಜನತಾ ಪಕ್ಷದವರು. ಆದರೆ ಇವರು ತಾವೇ ಅಧಿಕಾರದಲ್ಲಿರುವ ಕರ್ನಾಟಕ ರಾಜ್ಯದಲ್ಲಿ ಇದೇ ವಿಷಯದ ಬಗ್ಗೆ ಗಟ್ಟಿಯಾಗಿ ಮಾತನಾಡಲೂ ಸಹ ಸಿದ್ಧರಿಲ್ಲ; ಸರ್ಕಾರಿ ಇಲಾಖೆಯೇ ತನಿಖೆಯೇ ನಡೆಸಿ ಸುಳ್ಳು ಜಾತಿಪತ್ರ ಪಡೆದವರನ್ನು ಪತ್ತೆ ಹಚ್ಚಿ ಕೊಟ್ಟರೂ ಸಹ ಮೂಕರಂತಿರುವುದು ಈ ಜನತಾ ಪಕ್ಷದ ಜನರ ಡಂಭಾಚಾರವನ್ನೂ, ಕಪಟತನವನ್ನೂ, ಮೊಸಳೆ ಕಣ್ಣೀರನ್ನೂ ಬಯಲುಪಡಿಸುತ್ತದೆ.

ಗಡದಲ್ಲಿ ದಲಿತ ಶಿಕ್ಷಕರ ನರಕ

ಟದಿಂದ

ರ್ಮನ್ ರಾಮಲಿಂಗರೆಡ್ಡಿ ತನ್ನ ಮಾತನ್ನು ಸಿದನೆಂದು ಕೋಪಗೊಂಡು ಹೊರಟು ದ. ಮತ್ತೆ ಆಗಾಗ್ಗೆ ಅದಕ್ಕಾಗಿ ಒತ್ತಾಯಿಸು ದುಡ್ಡು ಎಷ್ಟಾದರೂ ಕೊಡ್ತೀನಿ ಅಂತ ನ್ನೊಡ್ಡಿದ. ಪ್ರಾಮಾಣಿಕ ಉಪಾಧ್ಯಾಯ ಲೂ ತಿರಸ್ಕರಿಸಿದರು.

-6–83ರಂದು ರಾಮಲಿಂಗರೆಡ್ಡಿಯು ತನ್ನ ರಾದ ಕೆ. ಅಂಜನರೆಡ್ಡಿ, ಈಡಿಗರ ಚನ್ನಪ್ಪ ಕ್ಷ್ರಯ್ಯ. ಅಲಕುಂದಪ್ಪ–ಇವರೊಂದಿಗೆ ಶಾಲೆಗೆ ನುಗ್ಗಿ ಶಾಲೆಯ ಪೀಠೋಪಕರಣ ಮುಂತಾದವನ್ನು ತನಿಖೆ ಮಾಡಬೇಕೆಂದು ಹೇಳಿದರು. ತನಿಖೆ ನಡೆಸುವ ಅಧಿಕಾರ ತಮಗಿಲ್ಲವೆಂದು ಹೇಳಿದಾಗ "ನನ್ನ ಎದುರಿಗೆ ಮಾತಾಡುತ್ತೀಯ ಈ ಊರಿನ ಛೇರ್ಮನ್ ನಾನು, ಈ ಊರೇ ನನ್ನದು ನನ್ನ ಅಧಿಕಾರ ಪ್ರಶ್ನಿಸುತ್ತೀಯಾ, ನನ್ನ ಊರಿನಲ್ಲಿ ನಿನ್ನ ಆಫೀಸರನದೇನು ಅನುಮತಿ ಅಂತ ಕೂಗಾಡಿದ. ಪ್ರತಿಭಟಿಸಿದಾಗ ಕೆನ್ನೆಗೆ ಹೊಡೆದು ಹಲ್ಲೆ ನಡೆಸಿದ. "ಮಾದಿಗ ನನ್ನ ಮಗನೇ ದನ ತಿನ್ನುವ ಬೋಳೀಮಗನೆ ನಾನು ಹೇಳಿದ ಹಾಗೆ ಕೇಳದಿದ್ದರೆ ನಮ್ಮೂರಲ್ಲಿ ಯಾಕಿರಬೇಕೋ" ಎಂದು ಹೀನವಾಗಿ ಬೈದ. ಈತನ ಸಂಗಡಿಗರೂ ಹಲ್ಲೆಮಾಡಿ ನಿಶ್ಚೇಷ್ಟಿತವಾಗುವಂತೆ ಹಿಡಿದುಕೊಂಡರು. ಆಗ ಛೇರ್ಮನ್ ತನ್ನ ಚಪ್ಪಲಿಯಿಂದ ಹೊಡೆದು ತೀವ್ರ ಹಲ್ಲೆ ನಡೆಸಿದ. "ಇವತ್ತು ಸ್ಕೂಲ್ ಮುಚ್ಚಿ, ಇವನ್ನ ಒದ್ದು ಓಡಿಸಿ" ಅಂತ ಆಚೆಗೆ ದಬ್ಬಿಸಿದ, ಒಂಟಿ ಉಪಾಧ್ಯಾಯರು ಈಚೆಗೆ ಬಂದಂದಿನಿಂದ ಮುಗ್ಧ ಮಕ್ಕಳ ವಿದ್ಯಾಭ್ಯಾಸಕ್ಕೂ ಮಣ್ಣು ಬಿತ್ತು.

ಸುದ್ದಿ ತಿಳಿದ ಪಾವಗಡ ತಾಲ್ಲೂಕು ಶಾಖೆಯ ದಲಿತ ಸಂಘರ್ಷಸಮಿತಿ ಗೆಳೆಯರು ಸ್ಥಳೀಯ ಉಪಾಧ್ಯಾಯ [illegible] ಒಡಗೂಡಿ ಈ ಹಲ್ಲೆಯನ್ನು ಪ್ರತಿಭಟಿಸಿದ್ದಾರೆ. —ರಂಟಿ

ಸಂಪಾದಕ, ಪ್ರಕಾಶಕ : ಗೋವಿಂದಯ್ಯ, ವಿನಯ ಪ್ರಿಂಟರ್ಸ್ 2514, ಕೆ. ಜಿ. ಕೊಪ್ಪಲು, ಮೈಸೂರು–14.

ಆ ಮನುಷ್ಯ ಆ ಕಂದಾಚಾರ, ಸಂಕೀರ್ಣ, ತಲೆಚಿಟ್ಟು ಹಿಡಿಸುವಂಥ ವಾತಾವರಣದಿಂದ ನನ್ನನ್ನು ಕೈಹಿಡಿದು ಮೇಲೆತ್ತಿದರು. ಹಾಗೆ ನೋಡಿದರೆ ಮನೆಯಲ್ಲಿ ನನ್ನ ದೊಡ್ಡಣ್ಣನವರ ಸಂಘರ್ಷವೂ ಅತ್ತ ಕಡೆಯೇ ಇದ್ದಿತಾದರೂ ಈ ವ್ಯಕ್ತಿ ವಯಸ್ಸಿನಲ್ಲೂ ದೊಡ್ಡವರಿದ್ದರು ಹಾಗೂ ಅವರ ವ್ಯಕ್ತಿತ್ವವೂ ತುಂಬಾ ಪ್ರಭಾವವಶಾಲಿಯದಾಗಿತ್ತು. ಸಾಹಿತ್ಯದ ಬಗ್ಗೆಯೂ ಗಾಢವಾದ ಅಭಿರುಚಿ ಹೊಂದಿದ್ದ ಅವರ ವ್ಯಕ್ತಿತ್ವ ತುಂಬಾ ಆಕರ್ಷಕವೂ ಸ್ಪಷ್ಟವಾದಿತ್ವದಿಂದಲೂ ಕೂಡಿತ್ತು.

ಆದರೆ ಈ ವ್ಯಕ್ತಿ ಬಂಡಾಯ ಸ್ವಭಾವದವರಾಗಿರಲಿಲ್ಲ. ಯಾವುದೇ ವಿಷಯದಲ್ಲಿ ಮಧ್ಯಮ ಮಾರ್ಗವನ್ನನುಸರಿಸುವುದರಲ್ಲಿ ಇವರು ಅಪಾರ ನಂಬಿಕೆಯನ್ನಿಟ್ಟಿದ್ದರು. ಈ ಕಾರಣದಿಂದಾಗಿಯೇ ಇವರು ವಿದ್ಯಾರ್ಥಿಗಳಲ್ಲಿ ಎಷ್ಟರಮಟ್ಟಿಗೆ ಜನಪ್ರಿಯರಾಗಿದ್ದರೋ ಅಷ್ಟರಮಟ್ಟಿಗೆ ವಿದ್ಯಾರ್ಥಿಗಳ ತಾಯಿ–ತಂದೆಯರ ಮಧ್ಯದಲ್ಲೂ ಜನಪ್ರಿಯರಾಗಿದ್ದರು. ವಾಸ್ತವವಾಗಿ ಇದೊಂದು ಬಗೆಯ ವಿರೋಧಾಭಾಸದಂತಿತ್ತು.

ಆ ದಿನಗಳಲ್ಲೇ ಮತ್ತೊಂದು ಬಿರುಗಾಳಿ ಎದ್ದಿತು. ಈ ಬಿರುಗಾಳಿಯ ಹೊಡೆತಕ್ಕೆ ನಮ್ಮ ಚಿಕ್ಕ ಊರಿನ ಗೋಡೆಗಳು ಅಲುಗಾಡತೊಡಗಿದುವು. ಸ್ವಾತಂತ್ರ್ಯಾಂದೋಲನ ತೀವ್ರಗೊಳ್ಳುತ್ತಿತ್ತು. ವಿದ್ಯಾರ್ಥಿಗಳು ಬ್ರಿಟಿಷರ ವಿರುದ್ಧ ಬಂಡಾಯವೆದ್ದಿದ್ದರು. ಅತ್ತ ಭಗತಸಿಂಹನನ್ನು ನೇಣುಗಂಬಕ್ಕೆ ಏರಿಸಲಾಗಿತ್ತು. ಹೀಗಾಗಿ ವಿದ್ಯಾರ್ಥಿಗಳ ಹೃದಯ ಧಗಧಗಿಸುತ್ತಿತ್ತು. ನನ್ನ ಈ ಅಧ್ಯಾಪಕರ ಸಹಾನುಭೂತಿ ದೇಶಭಕ್ತರ ಕಡೆ ಇತ್ತಾದರೂ ಆಂದೋಲನದಲ್ಲಿ ಧುಮುಕುವಂಥ ಸ್ವಭಾವ ಅವರದಾಗಿರಲಿಲ್ಲ. ಸರಿ, ಅವರನ್ನೂ ಅನುಸರಿಸಿ ಅವರ ವಿದ್ಯಾರ್ಥಿಗಳು ಸಹ ಆಂದೋಲನದ ಪ್ರೇಕ್ಷಕರಾಗಷ್ಟೇ ಉಳಿದರು.

ಈ ಮಧ್ಯೆ ಬಿ. ಎ. ಹಾಗೂ ಎಂ. ಎ. ಅಧ್ಯಯನ ನಡೆಸಲು ನಾನು ಲಾಹೋರಿಗೆ ಬಂದೆ. ಅಲ್ಲಿ ಕಾಲೇಜಿನ ನಾಲ್ಕೂ ಕಡೆ ಇಂಗ್ಲಿಷ್‌ತನ ಬೇರೂರಿತ್ತು. ಎಲ್ಲ ವಿದ್ಯಾರ್ಥಿಗಳು ಕಾಲೇಜನ್ನು ಬಿಟ್ಟ ಬಳಿಕ ದೊಡ್ಡ–ದೊಡ್ಡ ಸರ್ಕಾರಿ ಅಧಿಕಾರಿಗಳಾಗುವ ಕನಸು ಕಾಣುತ್ತಿದ್ದರೇ ಹೊರತಾಗಿ ಹೊರ ಜಗತ್ತಿನಲ್ಲಾಗುತ್ತಿದ್ದ ಆಂದೋಲನದ ಯಾವೊಂದು ಸದ್ದೂ ಇವರವರೆಗೆ ತಲುಪುತ್ತಿರಲಿಲ್ಲ.

ಐದನೆಯ ಜಾರ್ಜ್ ಮಹಾಪ್ರಭು ಹೊಸ ವರ್ಷದ ರಾತ್ರಿ ಸಾಮ್ರಾಜ್ಯವನ್ನುದ್ದೇಶಿಸಿ ಹೊಸ ವರ್ಷದ ಸಂದೇಶವನ್ನು ರೇಡಿಯೋ ಮೂಲಕ ನೀಡುತ್ತಿದ್ದರು. ನಾನು ಮತ್ತು ಗವರ್ನಮೆಂಟ್ ಕಾಲೇಜಿನ ನನ್ನ ಸ್ನೇಹಿತರು ಮುಂಜಾನೆ ಮೂರು ಗಂಟೆಗೆ ರೇಡಿಯೋ ಮಗ್ಗುಲಲ್ಲಿ ಕುಳಿತು ಅವರ ಭಾಷಣ ಕೇಳಿಸಿಕೊಳ್ಳುತ್ತಿದ್ದೆವು. ಎಡ್ವರ್ಡ್ ಶ್ರೀಮತಿ ಸಿಂಪ್ಸನ್ ಜೊತೆ ವಿವಾಹವಾಗುವ ಪ್ರಸ್ತಾಪ ಮಾಡಿದರು. ಈ ಕಾರಣದಿಂದ ತನ್ನ ಪದವಿಯಿಂದ ಕೈತೊಳೆದುಕೊಳ್ಳಬೇಕಾದಂಥ ಪ್ರಸಂಗ ಅವರಿಗೆ ಬಂತು. ಆಗ ನನ್ನ ಮತ್ತು ನನ್ನ ಗೆಳೆಯರು ತುಂಬಾ ಹಿಗ್ಗಿದೆವು. ಓದು ಬರಹದಲ್ಲಿ ಮನಸ್ಸು ಮಗ್ನವಾಗುತ್ತಿರಲಿಲ್ಲ. ನಾಲ್ಕೂ ಕಡೆ ಈ ಆದರ್ಶ ಪ್ರೇಮದ ಚರ್ಚೆಯೇ ಚರ್ಚೆ. ದೇಶದ ಬದುಕಿನಿಂದ ದೂರವಾದ ಬೇರೊಂದು ವೃತ್ತದಲ್ಲಿ ನಾನು ಬಂದಿಳಿದಿದ್ದೆ.

ನನ್ನ ಊರಿಗೆ ಹಿಂತಿರುಗಿದಾಗ ಅಲ್ಲಿನ ವಾತಾವರಣ ಬಹಳಷ್ಟು ಬದಲಾಗಿರುವುದನ್ನು ಕಂಡೆ. ದ್ವಿತೀಯ ವಿಶ್ವಯುದ್ಧದ ಮೋಡಗಳು ಅಂಬರದಲ್ಲಿ ತೇಲಲಾರಂಭಿಸಿದ್ದುವು; ಈ ದೇಶದಲ್ಲಿ ರಾಜಕೀಯ ಸ್ಥಿತಿ-ಗತಿಗಳು ಬಿಸಿಯೇರತೊಡಗಿದ್ದವು. ಆಗಿನ ಪರಿಸ್ಥಿತಿಗಳು ನನ್ನ ಮೇಲೆ ಬಗೆಬಗೆಯ ಒತ್ತಡಗಳನ್ನು ತರುತ್ತಿದ್ದಾಗ್ಯೂ ನಾನು ಆಗಲೂ ನನ್ನ ಈ ಅಧ್ಯಾಪಕರ ಚರಣ-ಚಿಹ್ನೆಗಳನ್ನೇ ಅನುಸರಿಸುತ್ತಿದ್ದೆ. ದೇಶದ ಬದಲಾಗುತ್ತಿದ್ದ ವಾತಾವರಣ ನನಗೆ ಅರಿವಾಗದೆ ಏನೂ ಇರಲಿಲ್ಲ. ಆ ದಿನದ ಘಟನೆ ನೆನಪಾಗುತ್ತಿದೆ-ನಾನು ಮತ್ತು ನನ್ನ ಅಧ್ಯಾಪಕರು ಕಂಟೋನ್ಮೆಂಟಿನಲ್ಲಿ ಒಂದು ದಿನ ವಾಯುವಿಹಾರ ಹೊರಟಿದ್ದೆವು. ಬಹಳ ಹೊತ್ತಿನವರೆಗೂ ಅಡ್ಡಾಡಿದ ನಂತರ ಚಹಾ ಕುಡಿಯಲೆಂದು ಒಂದು ಹೋಟೆಲಿಗೆ ಬಂದು ಕುಳಿತೆವು. ಆ ಹೋಟೆಲ್ ಬಿಳಿ ಸೈನಿಕರಿಂದ ಖಚಾಖಚ್ ತುಂಬಿ ಹೋಗಿತ್ತು. ಆ ಹೋಟೆಲ್‌ನ ಮಾಲೀಕ ಯಾವನೋ ಚೀನಾದವ. ಮುಖದ ಬೆವರು ಒರಸಿಕೊಳ್ಳುವಷ್ಟು ಪುರಸತ್ತು ಅವನಿಗಿರಲಿಲ್ಲ. ಸುಮಾರು ಅರ್ಧಗಂಟೆಯವರೆಗೆ ನಾವು ಕಾದರೂ ನಮಗೆ ಚಹಾ ಬರಲಿಲ್ಲ. ಆದರೆ ನಮಗಿಂತಲೂ ತಡವಾಗಿ ಬಂದ ಅನೇಕ ಬಿಳಿ ಸೈನಿಕರಿಗೆ ಚಹ ಸರ್ವ್ ಮಾಡಲಾಗಿತ್ತು. ಇದು ಜಾತಿಭೇದ ಎಂದು ಸ್ಪಷ್ಟವಾಗಿ ಗೊತ್ತಾಯಿತು. ನಾವಿಬ್ಬರು ಭಾರತೀಯರುಮಾತ್ರ ಹೋಟೆಲಿನಲ್ಲಿ ಕುಳಿತಿದ್ದೆವು. ಆ ಹೋಟೆಲ್ ಚೀನಿ ಮಾಲೀಕ ನಮ್ಮ ಪಕ್ಕದಿಂದ ಹಾಯ್ದು ಹೋದಾಗ ನಾನು ನಮಗೆ ಚಹ ಕಳಿಸುವಂತೆ ಆಗ್ರಹಪಡಿಸಿದೆ. ಆದರೆ ಅವನು ತುಂಬಾ ದಾರ್ಷ್ಟ್ಯದಿಂದ 'No tea No tea' ಅಂದದ್ದೇ ಬಡಬಡಾಂತ ಬೇರೊಂದು ಕಡೆಗೆ ಹೋದ. ನನಗೆ ಬೆಂಕಿ ಇಟ್ಟಂತಾಯಿತು. ನಮ್ಮೂರಿನಲ್ಲೇ ನಮ್ಮ ಜೊತೆಯೇ ಈ ರೀತಿಯ ವ್ಯವಹಾರವೇ ಎಂದು ನನಗೆ ಇದು ಅಸಹನೀಯ ಅನ್ನಿಸಿತು. ನಾನು ಎದ್ದು ಆ ಚೀನಿ ಮಾಲೀಕನ ಬಳಿ ಹೋಗುವವನಿದ್ದೆ, ನನ್ನ ಈ ಅಧ್ಯಾಪಕರು ನನ್ನನ್ನು ತಡೆದು ಹೊರಗೆ ಕರೆದುಕೊಂಡು ಹೋದರು.

ಇದು ಅವನ ಹೋಟೆಲ್, ನಮ್ಮದಲ್ಲ, ಯಾರಿಗೆ ಸರ್ವ್ ಮಾಡಬೇಕು ಯಾರಿಗೆ ಸರ್ವ್ ಮಾಡಬಾರದು ಎಂದು ತೀರ್ಮಾನಿಸುವ ಹಕ್ಕು ಅವನಿಗೆ ಬಿಟ್ಟದ್ದು ಎಂದರು.

ನಾನು ನನ್ನ ಅಧ್ಯಾಪಕರ ಮುಖವನ್ನೇ ದಿಟ್ಟಿಸತೊಡಗಿದೆ. ಅವರು ಈ ಬಗೆಯ ತರ್ಕ ಮಂಡಿಸುವರು ಎಂದು ನನಗನಿಸಿರಲಿಲ್ಲ. ಪುನಃ ಅವರು ಹೇಳಿದರು. 'ನೀನು ಇಷ್ಟು ಸಣ್ಣ ಪುಟ್ಟ ವಿಷಯಕ್ಕೆಲ್ಲ ಕಾಲು ಕೆರೆದುಕೊಂಡು ಜಗಳ ಮಾಡುವುದು ನನಗಿಷ್ಟ ಇಲ್ಲ'.

ನಾನು ಮೌನವಾಗಿ ಅವರ ಜೊತೆ ಅಲ್ಲಿಂದ ಹೊರಟುಹೋದೆ. ಆ ದಿನಗಳು ಎಂಥವೆಂದರೆ ಬೇರೆ ಊರುಗಳಲ್ಲಿ ಜನ ತುಂಬಾ ಅಪಾಯಕಾರಿ ಸ್ಥಿತಿಯಲ್ಲಿದ್ದು ಹೋರಾಡುತ್ತಿದ್ದರು. ನನ್ನ ಸ್ವಭಾವಗತವಾದ ಭೀರುತ್ವ ಕಡಿಮೆಯಾಗುತ್ತ ಬಂದಿತ್ತು. ನಾನು ಮೌನವಾಗಿ ಅವರ ಜೊತೆ ಮನೆಗೆ ಹಿಂತಿರುಗಿ ಬಂದೆನಾದರೂ ಮೊಟ್ಟಮೊದಲ ಸಾರಿ ಅವರ ಉದಾರವಾದಿ ಪ್ರವೃತ್ತಿ ನನ್ನನ್ನು ಚುಚ್ಚತೊಡಗಿತು.

ಇದಾದ ನಂತರ ನಮ್ಮ ಮಧ್ಯೆ ಚರ್ಚೆಗಳಾದುವು. ಒಂದೆರಡು ಸಾರಿ ಬಿಸಿ ವಾತಾವರಣವೂ ಉಂಟಾಯಿತು. ನಾವು ಒಬ್ಬರಿಗೊಬ್ಬರು ಹತ್ತಿರವಿದ್ದು ಒಬ್ಬರಿನ್ನೊಬ್ಬರಿಂದ ದೂರವಾಗತೊಡಗಿದೆವು. ತಲೆಮಾರುಗಳ ನಡುವಿನ ಅಂತರದ ಸ್ಥಿತಿ ಆದಾಗಿತ್ತು. ಆದರೆ ಹೊಸ ತಲೆಮಾರು ಹಳೆಯ ತಲೆಮಾರಿಗಿಂತ ಬೇರೆಯಾಗಿದ್ದಾಗ್ಯೂ ಅದು ಹಳೆಯ ತಲೆಮಾರಿನ ಬಗ್ಗೆ ಋಣಿಯಾಗಿರುತ್ತದೆ. ಈ ಅಧ್ಯಾಪಕರು ನನ್ನ ಬದುಕಿನಲ್ಲಿ ಎಂದೋ ಒಮ್ಮೆ ತೆರೆದ ಕಿಟಕಿಯಿಂದ ಸಾಕಷ್ಟು ಬೆಳಕು ಬಂದಿತ್ತು. ಅವರು ತಮಗರಿವಿಲ್ಲದಂತೆಯೇ ನನಗೆ ಬಹಳಷ್ಟನ್ನು ನೀಡಿದ್ದರು.

ಆದರೆ ವಾಸ್ತವವಾಗಿ ಅವರು ನನಗೇನು ಕೊಟ್ಟಿದ್ದರು ? ಮನುಷ್ಯನ ಸಂವೇದನೆ ತನ್ನ ಪರಿಸರದಿಂದ ಯಾವ ಸಂಸ್ಕಾರಗಳನ್ನೂ ಆತ್ಮೀಕರಿಸಿಕೊಳ್ಳುತ್ತದೆ ಹಾಗೂ ಯಾವ ಯಾವ ಅಂಶಗಳನ್ನು ಸ್ಪರ್ಶಿಸದೆ ಬಿಟ್ಟುಬಿಡುತ್ತದೆ ಎಂಬುದನ್ನು ಹೇಳುವುದು ತುಂಬಾ ಕಷ್ಟ. ಏಕೆಂದರೆ ಸಂಸ್ಕಾರಗಳ ಪ್ರಪಂಚವೇ ಅಷ್ಟು ಸಂಕೀರ್ಣ ಹಾಗೂ ದುರ್ಭೇದ್ಯವಾದದ್ದು. ಇಷ್ಟೆಲ್ಲ ಹೇಳಿಯೂ ನಾನು ಎಲ್ಲಿದ್ದೇನೆ ಎಂಬುದು ನನಗೇ ಗೊತ್ತಿಲ್ಲ. ನನ್ನ ಅಧ್ಯಾಪಕರು ನನಗೇನು ಕೊಟ್ಟರು ?-ಸಾಹಿತ್ಯ ಪ್ರೇಮವನ್ನೆ ? ಉದಾರವಾದಿ ಮನೋಭಾವವನ್ನೇ ? ಯಾವುದನ್ನೂ ಅಂಟಿಕೊಳ್ಳದೆ ತನ್ನಷ್ಟಕ್ಕೆ ತಾನು ಸರಿದುಹೋಗುವಂಥ ಪ್ರವೃತ್ತಿಯನ್ನೇ ?

ಮುಂದುವರಿಯುವುದು